# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಏಪ್ರಿಲ್ 29, 2023

ಸಂಪುಟ : 49 ಸಂಚಿಕೆ : 347 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ಬಿಜೆಪಿ ರಾಜ್ಯವನ್ನು ಸುರಕ್ಷಿತಗೊಳಿಸಿದೆ

## ಬಿಜೆಪಿಯದ್ದು ಡಬಲ್ ಇಂಜಿನ್, ಕಾಂಗ್ರೆಸ್‌ನದ್ದು ರಿವರ್ಸ್ ಗೇರ್: ಷಾ



ಹರಿಹರ ಚುನಾವಣಾ ಪ್ರಚಾರ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ

ಹರಿಹರ, ಏ. 28 – ಕಾಂಗ್ರೆಸ್‌ಗೆ ತಾನು ಅಧಿಕಾರಕ್ಕೆ ಬರುವುದಿಲ್ಲ ಎಂದು ಗೊತ್ತಿಗಿದೆ. ಹೀಗಾಗಿ ಆ ಪಕ್ಷ ಏನು ಬೇಕಾದರೂ ಭರವಸೆ ನೀಡಬಹುದು. ಆ ಪಕ್ಷದ ಗ್ಯಾರಂಟಿಗಳಿಗೆ ಯಾವುದೇ ಗೌರವವಿಲ್ಲ, ಮೌಲ್ಯವಿಲ್ಲ ಎಂದು ಬಿಜೆಪಿ ನಾಯಕ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದರು.

ಇಲ್ಲಿನ ಗಾಂಧಿ ಮೈದಾನದಲ್ಲಿ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಪರವಾಗಿ ನಡೆದ ಚುನಾವಣಾ ಪ್ರಚಾರದ ಬಹಿರಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಗ್ಯಾರಂಟಿ ನೀಡುವುದರಲ್ಲಿ ಕಳೆದುಕೊಳ್ಳುವಂಥದ್ದೇನೂ ಇಲ್ಲ. ಅಧಿಕಾರಕ್ಕೆ ಬರುವುದೇ ಇಲ್ಲ ಎಂದ ಮೇಲೆ ಏನಾದರೂ ಹೇಳಬಹುದು ಎಂದು ಚಿಂತೆಯಿಲ್ಲದೇ ಮಾತನಾಡುತ್ತಿದ್ದಾರೆ. ಅಪ್ಪಿ ತಪ್ಪಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ಭ್ರಷ್ಟಾಚಾರ, ಓಲೈಕೆ ರಾಜಕಾರಣ ಹಾಗೂ ಕುಟುಂಬ ರಾಜಕಾರಣದ ಗ್ಯಾರಂಟಿ ಮಾತ್ರ ಉಳಿಯಲಿದೆ. ಕಾಂಗ್ರೆಸ್ ಪಕ್ಷ ದಂಗೆಯ ಗ್ಯಾರಂಟಿ ಮಾತ್ರ ಕೊಡಬಲ್ಲದು ಎಂದವರು ಹೇಳಿದರು.

ಕಾಂಗ್ರೆಸ್ ರಾಜ್ಯದಲ್ಲಿದ್ದಾಗ ಪಿ.ಎಫ್.ಐ.ಗೆ. ಮುಕ್ತ ಅವಕಾಶ ನೀಡಲಾಗಿತ್ತು. ಆದರೆ, ಬಿಜೆಪಿ ಸರ್ಕಾರ ಪಿ. ಎಫ್.ಐ. ನಿಷೇಧಿಸಿ ಅದರ ಮುಖಂಡರನ್ನು ಬಂಧಿಸಿ, ರಾಜ್ಯವನ್ನು ಸುರಕ್ಷಿತಗೊಳಿಸಿದೆ ಎಂದು ಅಮಿತ್ ಷಾ ಹೇಳಿದರು. ಪ್ರಧಾನಿ ಮೋದಿ ಅವರು ಈ ದೇಶ ಸುರಕ್ಷಿತಗೊಳಿಸಿದ್ದಾರೆ, ಬಡವರಿಗೆ ಸೌಲಭ್ಯ ನೀಡಿದ್ದಾರೆ ಮತ್ತು ದೇಶದ ಗೌರವ ಹೆಚ್ಚಿಸಿದ್ದಾರೆ. ಆದರೆ, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ (3ನೇ ಪುಟಕ್ಕೆ)

### ಯಾರ ಮೀಸಲಾತಿ ಕಡಿತಗೊಳಿಸುತ್ತೀರಿ?

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಧರ್ಮ ಆಧರಿತ ಮೀಸಲಾತಿಗೆ ಅವಕಾಶವಿಲ್ಲ. ಹೀಗಾಗಿ ಮುಸ್ಲಿಮರ ಮೀಸಲಾತಿಯನ್ನು ರಾಜ್ಯ ಬಿಜೆಪಿ ಸರ್ಕಾರ ರದ್ದುಗೊಳಿಸಲು ಮುಂದಾಗಿದೆ. ಆದರೆ, ಕಾಂಗ್ರೆಸ್ ಮತ್ತೆ ಮುಸ್ಲಿಮರ ಮೀಸಲಾತಿ ಜಾರಿಗೆ ತರುವುದಾಗಿ ಹೇಳುತ್ತಿದೆ. ಇದಕ್ಕಾಗಿ ಯಾರ ಮೀಸಲಾತಿ ಕಡಿತಗೊಳಿಸಲಾಗುವುದು? ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಪ್ರಶ್ನಿಸಿದ್ದಾರೆ.

ಲಿಂಗಾಯತರು, ಒಕ್ಕಲಿಗರು, ಎಸ್‌ಸಿ, ಎಸ್‌ಟಿ ಹಾಗೂ ಒ.ಬಿ.ಸಿ. ಇವರಲ್ಲಿ ಯಾರ ಮೀಸಲಾತಿ ಕಡಿತ ಮಾಡಲಾಗುವುದು ಎಂಬುದನ್ನು ಕಾಂಗ್ರೆಸ್ ತಿಳಿಸಬೇಕು ಎಂದು ಷಾ ಒತ್ತಾಯಿಸಿದರು.

### ದಾವಣಗೆರೆಯಲ್ಲಿ ವಿಮಾನ ನಿಲ್ದಾಣ

ದಾವಣಗೆರೆಯಲ್ಲಿ ವಿಮಾನ ನಿಲ್ದಾಣಕ್ಕೆ ಯೋಜನೆ ಸಿದ್ಧವಾಗಿದೆ. ಜಿಲ್ಲೆಯಲ್ಲಿ ಜವಳಿ ಹಬ್ ಸಹ ನಿರ್ಮಿಸಲಾಗುವುದು. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದರು.

ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆ, ಎಸ್.ಟಿ.ಪಿ.ಐ. ಉಪ ಕೇಂದ್ರ, ಇ.ಎಸ್.ಐ. ಆಸ್ಪತ್ರೆ ಉನ್ನತೀಕರಣ, ಜಿಲ್ಲೆಯ ಏತ ನೀರಾವರಿ ಯೋಜನೆಗಳು, ತುಮಕೂರು ಚಿತ್ರದುರ್ಗ ದಾವಣಗೆರೆ ರೈಲು ಯೋಜನೆ ಸೇರಿದಂತೆ ಹಲವಾರು ಯೋಜನೆಗಳನ್ನೂ ಅವರು ಪ್ರಸ್ತಾಪಿಸಿದರು.

## ಅಧಿಕಾರಕ್ಕೆ ಬಂದ ಮೇಲೆ ಪ್ರತಿ ಪಂಚಾಯ್ತಿಗೆ 1 ಕೋಟಿ ರೂ.



ಜೇವರ್ಗಿ, ಏ. 28- ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ರಾಜ್ಯದ ಪ್ರತಿಯೊಂದು ಪಂಚಾಯ್ತಿಗೂ 1 ಕೋಟಿ ರೂ. ಅನುದಾನ ಹಾಗೂ ಕಲ್ಯಾಣ ಕರ್ನಾಟಕ ವಲಯಕ್ಕೆ 5 ಸಾವಿರ ಕೋಟಿ ರೂ.ಗಳ ಅನುದಾನ ನೀಡುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದ್ದಾರೆ.

ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ಬಿಜೆಪಿ 40 ಕ್ಷೇತ್ರಗಳಿಗೆ ಸೀಮಿತವಾಗಲಿದೆ. ಕಾಂಗ್ರೆಸ್ 150ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲಲಿದೆ ಎಂದರು.

## ದ್ವೇಷ ಭಾಷಣ : ದೂರಿರದಿದ್ದರೂ ಪ್ರಕರಣ ದಾಖಲಿಸಬೇಕು

ಎಲ್ಲಾ ರಾಜ್ಯಗಳಿಗೆ ಸುಪ್ರೀಂ ನಿರ್ದೇಶನ

ನವದೆಹಲಿ, ಏ. 28 – ದ್ವೇಷ ಭಾಷಣದ ಬಗ್ಗೆ ಯಾರೂ ದೂರು ದಾಖಲಿಸದೇ ಇದ್ದರೂ ಸಹ, ಅಂಥವರ ವಿರುದ್ಧ ಪ್ರಕರಣ ಹೂಡಬೇಕು ಎಂದು ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಿದೆ. ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ. ನಾಗರತ್ನ ಅವರನ್ನು ಒಳಗೊಂಡ ಪೀಠ ಈ ಆದೇಶ ಹೊರಡಿಸಿದ್ದು, ದ್ವೇಷ ಭಾಷಣಗಳು ದೇಶದ ಸೆಕ್ಯುಲರ್ ತಳಹದಿಗೆ ಅಪಾಯ ತಂದಿವೆ ಎಂದು ತಿಳಿಸಿದೆ. ದ್ವೇಷ ಭಾಷಣ ಕುರಿತು ಪ್ರಕರಣ ದಾಖಲಿಸುವುದನ್ನು ವಿಳಂಬ ಮಾಡಿದರೆ ಅದನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಲಾಗುವುದು ಎಂದು ಎಚ್ಚರಿಸಿದೆ.


### ಹನ್ನೆರಡನೇ ವರ್ಷದ ಸವಿನೆನಪು



ಲಿಂಗೈಕ್ಯ ಹೆಚ್.ಎನ್. ಷಡಾಕ್ಷರಪ್ಪನವರು
ಸಂಸ್ಥಾಪಕ ಸಂಪಾದಕರು, ಜನತಾವಾಣಿ
ಲಿಂಗೈಕ್ಯ : 29.04.2011

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳು ಸಂದವು.
ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿ ದೀಪ...

ನಿಮ್ಮ ನೆನಪಿನಲ್ಲಿರುವ
- ಪತ್ನಿ : ಶ್ರೀಮತಿ ಜಯಶೀಲ ಹೆಚ್.ಎನ್. ಷಡಾಕ್ಷರಪ್ಪ

ಮಕ್ಕಳಾದ :
- ಶ್ರೀಮತಿ ಉಜ್ವಲ ಶ್ರೀ ಡಿ.ಜಿ. ಸುಭಾಷ್
- ಶ್ರೀಮತಿ ಡಾ|| ಸೌಜನ್ಯ ಶ್ರೀ ಡಾ|| ಮಹೇಂದ್ರಪ್ಪ, ಮೈಸೂರು.
- ಶ್ರೀಮತಿ ಡಾ|| ಪೂರ್ಣಿಮಾ ಶ್ರೀ ಡಾ|| ಪ್ರಕಾಶ್ ಸೂರಣಗಿ, ದುಬೈ.
- ಶ್ರೀ ಎಂ.ಎಸ್. ವಿಕಾಸ್, ಸಂಪಾದಕರು, ಜನತಾವಾಣಿ, ಶ್ರೀಮತಿ ನೀತಾ
- ಶ್ರೀಮತಿ ಸ್ಮರಣ ಶ್ರೀ ರವಿ ಸಜ್ಜನ, ಯುಎಸ್‌ಎ
- ಶ್ರೀ ಡಾ|| ಎಂ.ಎಸ್.ವಿಶ್ವಾಸ್ ಶ್ರೀಮತಿ ರಶ್ಮಿ, ಯುಎಸ್‌ಎ

ಮೊಮ್ಮಕ್ಕಳಾದ : ಸಿದ್ಧಾರ್ಥ್, ಸಿಂಚನ್, ಸಹ್ಯಾದ್ರಿ, ರಜತಾದ್ರಿ, ಅಭಿಷೇಕ್, ಜಯಧರ, ಪ್ರೇರಣ, ರಿಯಾ, ರಿಚಾ, ಸಾನ್ವಿ, ಆರುಶ್ ಹಾಗೂ ಹೊನ್ನೇನಹಳ್ಳಿ ವಂಶಸ್ಥರು, ಮೆಳ್ಳೇಕಟ್ಟೆ ಹಾಗೂ ಬಂಧು-ಮಿತ್ರರು.
ಜನತಾವಾಣಿ ಬಳಗ.



### ಐದನೇ ಪುಣ್ಯಸ್ಮರಣೆ



ದಿ|| ಶ್ರೀ ಎನ್. ಲಿಂಗರಾಜು
AEE, PWD, Chitradurga
ಜನನ : 06.07.1959, ಮರಣ : 29.04.2018

ಸಂತಸ ನೀಡುವ ಬಂಧುವಾಗಿ, ಆಸರೆ ನೀಡುವ ಸ್ನೇಹಿತರಾಗಿ, ಎಲ್ಲರ ಮನದೊಳಗೆ ಶಾಶ್ವತವಾಗಿ ನೆಲೆಸಿ,
ಮರೆಯಾದ ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳು ಸಂದರೂ
ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ....

ಪತ್ನಿ : ಶ್ರೀಮತಿ ರಾಧಾ ಲಿಂಗರಾಜು
ಪುತ್ರ : ಶ್ರೀ ಅವಿನಾಶ್. ಎಲ್., ಶ್ರೀಮತಿ ಶಾಲಿನಿ,
ಪುತ್ರಿ : ಶ್ರೀಮತಿ ಶ್ವೇತಾ ಶ್ರೀ ಹರೀಶ್, ಮೊಮ್ಮಗಳು : ತ್ರಿಶಿಕ,
ಹಾಗೂ ಕುಟುಂಬಸ್ಥರು



|| ಶ್ರೀ ಶಿವ ನಾರದಮುನಿ ಪ್ರಸನ್ನ ||

### ಆರನೇ ಪುಣ್ಯಸ್ಮರಣೆ



ದಿ|| ಅಣಬೇರು ನಾಗರಾಜ್

ನೀವು ನಮ್ಮನ್ನಗಲಿ ಆರು ವರ್ಷಗಳು ಸಂದವು.
ನಿಮ್ಮ ಸರಳತೆ ಮತ್ತು ನೀವು ಅನುಸರಿಸಿದ ಸನ್ಮಾರ್ಗವೇ ನಮಗೆ ಪ್ರೇರಣೆ.
ನೀವು ತೋರಿದ ಅದಮ್ಯ ಪ್ರೀತಿಯನ್ನು ಸ್ಮರಿಸುತ್ತಾ
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ....

ತಂದೆ : ದಿ. ಶೇಖರಪ್ಪ ಅಣಬೇರು ಮತ್ತು ಮಕ್ಕಳು.
ತಾಯಿ : ಬಸಮ್ಮ ಶೇಖರಪ್ಪ ಅಣಬೇರು.
ಪತ್ನಿ : ಪಾರ್ವತಿ ನಾಗರಾಜ್ ಅಣಬೇರು.
ಪುತ್ರ : ಅಭಿಷೇಕ್ ಅಣಬೇರು. ಪುತ್ರಿ : ಅನುಶ್ರೀ ಅಣಬೇರು.
ಮಾಳಿಗೇರ ವಂಶಸ್ಥರು, ಅಣಬೇರು.



GURUDATT ACADEMY
Gateway to NEET & IIT
Classroom coaching for
8th, 9th, 10th std ( CBSE )
1st PUC & 2nd PUC ( NEET / JEE )
Supplementary batches.
Rangamahal, PJ Extension, Davangere.
Call: 9739865711



### ಎಂ. ನಿಂಗಪ್ಪ ನಿಧನ



#3617/3, 'ಹೇಮಂತ್' 8ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಎಂ.ಸಿ.ಸಿ.
'ಬಿ' ಬ್ಲಾಕ್, ದಾವಣಗೆರೆ ನಿವಾಸಿ
ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ

ಎಂ. ನಿಂಗಪ್ಪ (82)

ಇವರು ದಿನಾಂಕ 28.04.2023ರ ಶುಕ್ರವಾರ ಮಧ್ಯಾಹ್ನ ಸುಮಾರು 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಸಹೋದರರು, ಐವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.04.2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರಿನ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಫೋ. : 08192 222467, ಮೊ : 99869 08287, 94482 29565



### ಭಾವಪೂರ್ಣ ಶ್ರದ್ಧಾಂಜಲಿ




ಬಿಜೆಪಿ ಹಿರಿಯ ಮುಖಂಡರು, ಹೊಂಡದ ಸರ್ಕಲ್
ಕಟ್ಟಿಗೆ ಡಿಪೋ ಮಾಲೀಕರು, ಆತ್ಮೀಯರಾದ

ಶ್ರೀ ಆರ್.ಗಣೇಶ್‌ರಾವ್

ಅವರು ದಿ: 28.4.2023ರ ಶುಕ್ರವಾರ ನಿಧನರಾಗಿದ್ದು ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀ ಬನ್ನಿಮಹಾಂಕಾಳಿ ದೇವಸ್ಥಾನ ಸಮಿತಿ
ಹೊಂಡದ ಸರ್ಕಲ್, ಕೊಂಡಜ್ಜಿ ರಸ್ತೆ, ದಾವಣಗೆರೆ.

# ಬೈರನಪಾದ ಯೋಜನೆಗೆ ಮೊದಲ ಆದ್ಯತೆ



**ಹರಿಹರದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಭರವಸೆ**

ಹರಿಹರ, ಏ. 28 – ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದ ನಂತರ ಬೈರನಪಾದ ಯೋಜನೆಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದರು.

ಬಿಜೆಪಿ ನಾಯಕ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಉಪಸ್ಥಿತಿಯಲ್ಲಿ ನಗರದ ಗಾಂಧಿ ಮೈದಾನದಲ್ಲಿ ಇಂದು ನಡೆದ ಸಮಾವೇಶದಲ್ಲಿ ಅವರು ಮಾತನಾಡಿದರು.

ಹತ್ತು ದಿನಗಳಲ್ಲಿ ಚುನಾವಣೆ ಬಹಳ ಜೋಷ್ ಆಗಿ ನಡೆಯುತ್ತದೆ. ಈ ಬಾರಿ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಅವರನ್ನು 20 ಸಾವಿರಕ್ಕೂ ಹೆಚ್ಚು ಅಂತರದಿಂದ ಗೆಲ್ಲಿಸಿ ಎಂದು ಸಿದ್ದೇಶ್ವರ ಕರೆ ನೀಡಿದರು.

ಹರಿಹರ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರು ಏನೂ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಲ್ಲ. ಇದನ್ನು ಮನಗಂಡು ನಾನು ನೂರು ಕೋಟಿ ಅನುದಾನವನ್ನು ತಂದು ಅಭಿವೃದ್ಧಿ ಮಾಡಿಸಿರುವೆ ಎಂದರು.

ಅಭ್ಯರ್ಥಿ - ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಹರಿಹರ ತಾಲ್ಲೂಕುಗಳಲ್ಲಿ ನಾನು ಶಾಸಕನಾದ ಸಮಯದಲ್ಲಿ ಅಭಿವೃದ್ಧಿ ಕಂಡಿದ್ದು ಬಿಟ್ಟರೆ ಇತ್ತೀಚೆಗೆ ಹತ್ತು ವರ್ಷಗಳ ಕಾಲ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳು ಆಗಿಲ್ಲ ಎಂದರು.

ಮುಖಂಡರಾದ ಚಂದ್ರಶೇಖರ್ ಪೂಜಾರ್ ಮಾತನಾಡಿ, ಕಾಂಗ್ರೆಸ್, ಜೆಡಿಸ್ ಪಕ್ಷವನ್ನು ತೊರೆದು ಸುಮಾರು ಐದು ಸಾವಿರಕ್ಕೂ ಹೆಚ್ಚು ಜನರು ಬಿಜೆಪಿ ಪಕ್ಷವನ್ನು ಸೇರುತ್ತಿರುವುದನ್ನು ನೋಡಿದರೆ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರುವುದರಲ್ಲಿ ಎರಡು ಮಾತಿಲ್ಲ ಎಂದರು.

ಈ ಸಂದರ್ಭದಲ್ಲಿ ಶಾಸಕ ಎಸ್. ಎ. ರವೀಂದ್ರನಾಥ್, ಎಂ.ಎಲ್.ಸಿ. ನವೀನ್, ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ. ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಮುಖಂಡರಾದ ಎನ್.ಜಿ. ನಾಗನಗೌಡ್ರು, ತಾಲ್ಲೂಕು ಉಸ್ತುವಾರಿ ಜೀವನಮೂರ್ತಿ, ನಗರಸಭೆ ಸದಸ್ಯರಾದ ವಿಜಯಕುಮಾರ್, ಅಶ್ವಿನಿ ಕೃಷ್ಣ, ರಜನಿಕಾಂತ್, ಹನುಮಂತಪ್ಪ, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಮಾಜಿ ಅಧ್ಯಕ್ಷ ಹಲಸಬಾಳು ಶಿವಾನಂದಪ್ಪ, ಗ್ರಾಮಾಂತರ ಘಟಕದ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಕಾರ್ಯದರ್ಶಿಗಳಾದ ತುಳಜಪ್ಪ ಭೂತೆ, ಹೆಚ್.ಮಂಜಾನಾಯ್ಕ್, ಮಾಜಿ ತಾಪಂ ಅಧ್ಯಕ್ಷ ಅಣ್ಣಪ್ಪ ಐರಣಿ, ಪರಶುರಾಮ್ ಕಾಟ್ವೆ ಮತ್ತಿತರರು ಉಪಸ್ಥಿತರಿದ್ದರು.

## ಇಂದು ಮನೆಯಿಂದಲೇ ಮತದಾನ ಪ್ರಕ್ರಿಯೆ

ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ದಾವಣಗೆರೆ ಉತ್ತರ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅಂಚೆ ಮತದಾನ 12ಡಿ ಅರ್ಜಿ ಸಲ್ಲಿಸಿರುವ ಮತದಾರರ ಮನೆಯಿಂದಲೇ ಮತದಾನ ಪ್ರಕ್ರಿಯೆಯು ಇಂದು ಬೆಳಿಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ನಡೆಯುತ್ತದೆ. ದಾವಣಗೆರೆ ಉತ್ತರ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ 80 ವರ್ಷ ಮೇಲ್ಪಟ್ಟವರು, ವಿಶೇಷ ಚೇತನರು ಹಾಗೂ ಕೋವಿಡ್-19 ಬಾಧಿತ ಸೋಂಕಿತರಿಗೆ ಮನೆಯಿಂದಲೇ ಅಂಚೆ ಮತದಾನ ಮಾಡಲು ಅವಕಾಶ ಕಲ್ಪಿಸಿದ್ದು, ಈಗಾಗಲೇ ಅಂಚೆ ಮತ ದಾನಕ್ಕೆ ಅರ್ಜಿ ಸಲ್ಲಿಸಿರುವ ಮತದಾರರು ತಮ್ಮ ಮತ ಕ್ಷೇತ್ರದಲ್ಲಿ ಇದ್ದು, ಕಾರ್ಯಾಲಯದಿಂದ ನಿಯೋಜನೆಗೊಂಡಿರುವ ಅಧಿಕಾರಿಗಳಿಗೆ ಸಹಕಾರ ನೀಡಿ ಮತದಾನ ಮಾಡುವಂತೆ ಮಹಾ ನಗರ ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

# ಷಾ, ಆದಿತ್ಯನಾಥ್ ಪ್ರಚಾರ ನಿರ್ಬಂಧಿಸಲು ಒತ್ತಾಯ

ನವದೆಹಲಿ, ಏ. 28 – ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಅಲ್ಪಸಂಖ್ಯಾತರ ವಿರುದ್ಧ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್, ಉಭಯರು ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪ್ರಚಾರ ಮಾಡದಂತೆ ನಿಷೇಧಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿಕೊಂಡಿದೆ.

ಅಭಿಷೇಕ್ ಸಿಂಘ್ವಿ, ಪವನ್ ಬನ್ಸಾಲ್ ಹಾಗೂ ಮುಕುಲ್ ವಾಸ್ನಿಕ್ ಅವರನ್ನು ಒಳಗೊಂಡ ಕಾಂಗ್ರೆಸ್ ನಿಯೋಗ ಮುಖ್ಯ ಚುನಾವಣಾ ಆಯುಕ್ತ ಹಾಗೂ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಈ ಮನವಿ ಸಲ್ಲಿಸಿದೆ. ಅಮಿತ್ ಷಾ ಹಾಗೂ ಆದಿತ್ಯನಾಥ್ ಅವರು ಚುನಾವಣಾ ಲಾಭಕ್ಕಾಗಿ ಸುಳ್ಳು, ಕೋಮುವಾದಿ ಹಾಗೂ ಪಕ್ಷಪಾತಿ ಹೇಳಿಕೆ ನೀಡುತ್ತಿದ್ದಾರೆ. ಅವರನ್ನು ಪ್ರಚಾರದಿಂದ ನಿರ್ಬಂಧಿಸಬೇಕು ಎಂದು ಕಾಂಗ್ರೆಸ್ ನಿಯೋಗ ಮನವಿ ಮಾಡಿಕೊಂಡಿದೆ.

# ಕಾಂಗ್ರೆಸ್‌ನವರಿಗೆ ದೇಶಾಭಿಮಾನ, ಧರ್ಮ, ಸಂಸ್ಕೃತಿ ಬಗ್ಗೆ ಗೌರವವಿಲ್ಲ



ಹರಪನಹಳ್ಳಿ, ಏ.28- ದೇಶದ ಸಂಪತ್ತನ್ನು ಲೂಟಿ ಮಾಡಿ ಪಾಕಿಸ್ತಾನದ ಪರ ಮಾತನಾಡುವವರನ್ನು ಬೆಂಬಲಿಸಬಾರದು ಎಂದು ಹಿರಿಯ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ ಪರೋಕ್ಷವಾಗಿ ಕಾಂಗ್ರೆಸ್ ಪಕ್ಷವನ್ನು ಟೀಕಿಸಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಬಿಜೆಪಿ ವತಿಯಿಂದ ಇಂದು ಆಯೋಜಿಸಿದ್ದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಪ್ರಧಾನಿ ಮೋದಿಯವರು ದೇಶದಲ್ಲಿ ಭಯೋತ್ಪಾದನೆ, ಭ್ರಷ್ಟಾಚಾರ ಹತ್ತಿಕ್ಕಿದ್ದು, ದೇಶದ್ರೋಹಿಗಳನ್ನು ಸದೆ ಬಡೆದಿದ್ದಾರೆ. ಈ ಹಿಂದೆ 19ನೇ ಆರ್ಥಿಕ ರಾಷ್ಟ್ರವಾದ ಭಾರತವನ್ನು 5ನೇ ಆರ್ಥಿಕ ರಾಷ್ಟ್ರವಾಗಿ ಮಾಡಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಅಭ್ಯರ್ಥಿ ಜಿ.ಕರುಣಾಕರ ರೆಡ್ಡಿ ಮಾತನಾಡಿ, ಹರಪನಹಳ್ಳಿ ಜನರು 20 ವರ್ಷಗಳ ಕಾಲ ರಾಜಕೀಯವಾಗಿ ನನಗೆ ಅವಕಾಶ ಕಲ್ಪಿಸಿದ್ದು, 2 ಬಾರಿ ಶಾಸಕನನ್ನಾಗಿ ಆಯ್ಕೆ ಮಾಡಿದ್ದೀರಿ ನಿಮ್ಮ ಆಶೀರ್ವಾದದಿಂದಾಗಿ ಹಿಂದುಳಿದ ಹರಪನಹಳ್ಳಿ ತಾಲೂಕನ್ನು ಸರ್ವಾಂಗೀಣ ಅಭಿವೃದ್ಧಿ ಪಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ ಎಂದು ಹೇಳಿದರು.

ಸಂಸದ ವೈ.ದೇವೇಂದ್ರಪ್ಪ ಮಾತನಾಡಿದರು. ಈ ವೇಳೆ ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ಕಲ್ಲೇರ ಬಸವರಾಜಪ್ಪ, ಕಣಿವಿಹಳ್ಳಿ ವೀರಭದ್ರಪ್ಪ, ಆರ್. ಲೋಕೇಶ, ಕೆ.ಪ್ರಕಾಶ, ಪ್ರಾಣೇಶ, ತಿಮ್ಮಣ್ಣ, ಉದಯಕುಮಾರ, ಎನ್.ಜಿ.ಸಿದ್ದಪ್ಪ, ಶಿರಾಗನಹಳ್ಳಿ ವಿಶ್ವನಾಥ, ಸೇರಿದಂತೆ ಉಪಸ್ಥಿತರಿದ್ದರು.

**ಕೆಲವೇ ದಿನಗಳಲ್ಲಿ ಈ ದೇಶದಲ್ಲಿ ಸಮಾನ ನಾಗರಿಕ ಸಂಹಿತೆ ಕಾನೂನು ಜಾರಿಗೆ ಬರಲಿದ್ದು, ಇದರಿಂದ ಎಲ್ಲಾ ವರ್ಗಕ್ಕೂ ಸಮಾನತೆ ಸಿಗಲಿದೆ ಎಂದ ಅವರು, ಯಡಿಯೂರಪ್ಪ ಹಾಗೂ ಬೊಮ್ಮಾಯಿ ನೇತೃತ್ವದಲ್ಲಿ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ, ಶೇ.40ರಷ್ಟು ತಿಂದರೆ ಇಷ್ಟೆಲ್ಲಾ ಅಭಿವೃದ್ಧಿ ಆಗುತ್ತಿತ್ತಾ ?.**

**- ಬಸವನಗೌಡ ಪಾಟೀಲ್ ಯತ್ನಾಳ, ಹಿರಿಯ ಶಾಸಕರು**

# ನಗರದಲ್ಲಿ ನಾಳೆ ವಾಸವಿ ಜಯಂತಿ



ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ವತಿಯಿಂದ ಶ್ರೀ ಕನ್ಯಕಾ ಪರಮೇಶ್ವರಿ ದೇವ ಸ್ಥಾನದಲ್ಲಿ ಶ್ರೀ ವಾಸವಾಂಬ ಜ ಯ ೦ ತ್ಯೋ ತ್ಸ ವ ವು ಆರಂಭವಾಗಿದ್ದು, ನಾಳೆ ದಿನಾಂಕ 30ರವರೆಗೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಆರ್.ಎಲ್.ಪ್ರಭಾಕರ್ ತಿಳಿಸಿದ್ದಾರೆ.

ಪ್ರತಿದಿನ ಬೆಳಿಗ್ಗೆಯಿಂದ ಸಂಜೆಯವರೆಗೆ ಶ್ರೀ ಅಮ್ಮನವರಿಗೆ ಕುಂಕುಮಾರ್ಚನೆ, ಮಂಗಳಾರತಿ, ತೀರ್ಥ - ಪ್ರಸಾದ ವಿನಿ ಯೋಗ ನಡೆಯಲಿದ್ದು, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಇಂದು ಬೆಳಿಗ್ಗೆ 10 ರಿಂದ ವಾಸವಿ ಯುವ ಸಂಘದಿಂದ ಸುಪಲ್ ಗೇಮ್ಸ್, 11ಕ್ಕೆ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದಿಂದ ಆರ್ಥಿಕವಾಗಿ ಹಿಂದುಳಿದ ಸದಸ್ಯರ ಮಕ್ಕಳ ವಿದ್ಯಾ ಭ್ಯಾಸಕ್ಕಾಗಿ ಧನ ಸಹಾಯ, ಹಿಂದುಳಿದಮಹಿಳೆಯರಿಗೆ, ಅಮ್ಮನ ವರಿಗೆ ಅರ್ಪಿಸಿದ ಸೀರೆಗಳ ವಿತರಣೆ ನಡೆಯಲಿದೆ.

ಸಂಜೆ 6.30ಕ್ಕೆ ವಾಸವಿ ಮಹಿಳಾ ಸಂಘ ಮತ್ತು ವಾಸವಿ ಯುವತಿಯರ ಸಂಘ ಇವರಿಂದ ವಾಸವಿ ಗಾನಾಮೃತ ದಿಂದ ವಾಸವಿ ಸ್ಮರಣೆ, ತಾಳ, ಮೇಳ, ಕೋಲಾಟ, ಆರತಿಗಳೊಂದಿಗೆ ವಿನೂತನ ಭಜನಾ ಕಾರ್ಯಕ್ರಮ ನಡೆಯಲಿದೆ.

ನಾಳೆ ಭಾನುವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಕನ್ನಿಕಾಪರಮೇಶ್ವರಿ ಅಮ್ಮನವರ ಉತ್ಸವ ಮೂರ್ತಿಗೆ ಸೇವಾಕರ್ತರ ಸ್ವ ಹಸ್ತದಿಂದ ಕ್ಷೀರಾಭಿಷೇಕ, 11.30ಕ್ಕೆ ಸೇವಾಕರ್ತ ದಂಪತಿಗಳಿಂದ ಅಮ್ಮನವರ ತೊಟ್ಟಿಲು ಸೇವೆ, ಸಂಜೆ 6 ಗಂಟೆಗೆ ವಾಸವಿ ಭಜನಾ ಮಂಡಳಿ ಇವರಿಂದ ವಾಸವಿ ಸುಪ್ರಭಾತ ಕಾರ್ಯಕ್ರಮ ನಡೆಯಲಿದೆ.

ಮಧ್ಯಾಹ್ನ 1 ಗಂಟೆಗೆ ಸಂತರ್ಪಣೆ, ಸಂಜೆ 6 ಗಂಟೆಗೆ ಭವ್ಯ ಮಂಟಪದಲ್ಲಿ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ರಾಜಬೀದಿ ಉತ್ಸವವು ನೆರವೇರಲಿದೆ.

# ಆವರಗೆರೆಯಲ್ಲಿ ಇಂದು ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಮತ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಆವರಗೆರೆಯಲ್ಲಿ ಇಂದು ಪ್ರಚಾರ ನಡೆಸುವರು.

ಬೆಳಗ್ಗೆ 8.30ಕ್ಕೆ 30ನೇ ವಾರ್ಡಿನ ಆವರಗೆರೆಯಲ್ಲಿನ ಶ್ರೀ ಆಂಜನೇಯ ದೇವಸ್ಥಾನದಿಂದ ಮತ ಪ್ರಚಾರ ಆರಂಭವಾಗಲಿದೆ. ಸಂಜೆ 4.30ಕ್ಕೆ 42ನೇ ವಾರ್ಡಿನ ಸಿದ್ದವೀರಪ್ಪ ಬಡಾವಣೆ ಬಾಪೂಜಿ ಶಾಲೆ ಬಳಿ ಇರುವ ಶ್ರೀ ಗಣಪತಿ ದೇವಸ್ಥಾನದಿಂದ ಮತ ಯಾಚಿಸುವರು.

# ಮತಗಟ್ಟೆಗಳ ಮೂಲಭೂತ ಸೌಕರ್ಯ ಪರಿಶೀಲನೆ



**ಮಲೇಬೆನ್ನೂರು**

ಮಲೇಬೆನ್ನೂರು, ಏ.28- ವಿಧಾನಸಭೆ ಚುನಾವಣೆ ವೀಕ್ಷಕರಾದ ರಂಜಿತ್ ಕುಮಾರ್ ಅವರು ಶುಕ್ರವಾರ ಮಲೇಬೆನ್ನೂರು ಪಟ್ಟಣದ 10 ಮತಗಟ್ಟೆಗಳಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿದರು. ಇದೇ ವೇಳೆ ಭೋವಿ ಕಾಲೋನಿಗೆ ತೆರಳಿ ಮತದಾನದ ಬಗ್ಗೆ ಜನರಿಗೆ ಅರಿವು ಮೂಡಿಸಿದರು. ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್, ಉಪ ತಹಸೀಲ್ದಾರ್ ಆರ್.ರವಿ, ಸೆಕ್ಟರ್ ಅಧಿಕಾರಿ ಉಮೇಶ್, ಮುಜಿಬುಲ್ ರೆಹಮಾನ್, ಇಂಜಿನಿಯರ್ ಹಾಲೇಶಪ್ಪ, ರಾಜಸ್ವ ನಿರೀಕ್ಷಕ ಆನಂದ್, ಗ್ರಾಮ ಆಡಳಿತ ಅಧಿಕಾರಿ ಅಣ್ಣಪ್ಪ, ಶ್ರೀಧರ್, ಮತಗಟ್ಟೆ ಅಧಿಕಾರಿಗಳಾದ ದಂಡಿ ತಿಪ್ಪೇಸ್ವಾಮಿ, ಕರಿಬಸಪ್ಪ, ಪ್ರೇಮಲೀಲಾಬಾಯಿ, ನಿರಂಜನ್, ಆನಂದ್, ಮಮ್ತಾಜ್, ಗುರುಬಸವರಾಜ್, ಮಂಜುಳಾ ಮತ್ತಿತರರು ಈ ವೇಳೆ ಹಾಜರಿದ್ದರು.

## ವಸತಿ ಶಾಲೆಗೆ ಅರ್ಜಿ ಆಹ್ವಾನ

ದಾವಣಗೆರೆ, ಏ.28- ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ 6 ನೇ ತರಗತಿ ವ್ಯಾಸಂಗ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಈ ಶಾಲೆಗಳಲ್ಲಿ ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಶೇ.75 ರಷ್ಟು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶೇ. 25 ರಷ್ಟು ಪ್ರವೇಶ ನೀಡಲಾಗುತ್ತದೆ.

# ಹರಪನಹಳ್ಳಿಗೆ ಇಂದು ಸಿದ್ದರಾಮಯ್ಯ



ಹರಪನಹಳ್ಳಿ, ಏ. 28- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹರಪನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರ ಬಹಿರಂಗ ಪ್ರಚಾರಕ್ಕೆ ನಾಳೆ ದಿನಾಂಕ 29 ರ ಶನಿವಾರ ಆಗಮಿಸಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ ತಿಳಿಸಿದ್ದಾರೆ.

ಪಟ್ಟಣದ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಇಂದು ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ಶನಿವಾರ ಮಧ್ಯಾಹ್ನ 1 ಗಂಟೆಗೆ ಎಚ್.ಪಿ.ಎಸ್.ಕಾಲೇಜು ಮೈದಾನದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರ ಸಾರ್ವಜನಿಕ ಬಹಿರಂಗ ಸಭೆಯಲ್ಲಿ ಸಿದ್ದರಾಮಯ್ಯ ಭಾಗವಹಿಸಿ ಎನ್.ಕೊಟ್ರೇಶ್ ಪರ ಮತಯಾಚನೆ ಮಾಡಲಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷದ ವಿಜಯನಗರ ಜಿಲ್ಲಾಧ್ಯಕ್ಷ ಶಿರಾಜ್‌ಶೇಖ್, ದಾವಣಗೆರೆ ಶಾಸಕ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಸಚಿವ ಹೆಚ್.ಆಂಜನೇಯ, ಸಲೀಂ ಆಹ್ಮದ್, ಪಿ.ಟಿ.ಪರಮೇಶ್ವರ ನಾಯ್ಕ ಸೇರಿದಂತೆ ಪಕ್ಷದ ಅನೇಕ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಎನ್.ಕೊಟ್ರೇಶ್ ಮಾತನಾಡಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾರ್ಯಕ್ರಮಕ್ಕೆ ತಾಲ್ಲೂಕಿನಿಂದ 25 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಅಹಿಂದ ಮುಖಂಡ ಡಾ.ಉಮೇಶಬಾಬು ಪಕ್ಷದ ಅಭ್ಯರ್ಥಿ ಎನ್.ಕೊಟ್ರೇಶ್‌ರವರಿಗೆ ಬೆಂಬಲ ಘೋಷಣೆ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಎಚ್.ಬಿ.ಪರಶುರಾಮಪ್ಪ, ಶಶಿಧರ ಪೂಜಾರ್, ಹೆಚ್.ಕೆ.ಹಾಲೇಶ್, ಜಿ.ಪ್ರಕಾಶ, ಭರತೇಶ ಜೋಗಿನ್, ಅಂಬಡಿ ನಾಗರಾಜ, ಉಮೇಶಬಾಬು, ಬಿ.ನಜೀರ್ ಆಹ್ಮದ್, ಪಿಕೆಎಂ. ನಾಗಲಿಂಗಯ್ಯ, ಎ.ಮೂಸಸಾಬ್, ಹಾಲೇಶಗೌಡ, ವಕೀಲ ನಂದೀಶನಾಯ್ಕ, ಎಲ್.ಬಿ. ಹಾಲೇಶನಾಯ್ಕ, ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ಇಂದು ಮಕ್ಕಳಿಗೆ ಬೇಸಿಗೆ ಶಿಬಿರ

ನೇತಾಜಿ ಸ್ಕೌಟ್ಸ್ ಗ್ರೂಪ್ ಮತ್ತು ಚೇತನ ಗೈಡ್ ಗ್ರೂಪ್ ವತಿಯಿಂದ ಇಂದು ವಿವಿಧ ಕಾರ್ಯಕ್ರಮಗಳನ್ನೊಳಗೊಂಡ ಬೇಸಿಗೆ ಶಿಬಿರ ನಡೆಯಲಿದೆ. ಇಂದು ಬೆಳಿಗ್ಗೆ 9.30ಕ್ಕೆ ಹಿರಿಯ ರಂಗ ನಿರ್ದೇಶಕ ಸಿದ್ದರಾಜು ಅವರಿಂದ ರಂಗಕಲೆ ಮತ್ತು ಮಧ್ಯಾಹ್ನ 12ಕ್ಕೆ ಬಿ.ವಿ. ಸೌಮ್ಯ ರಿಂದ ಕರಕೌಶಲ್ಯ ಕುರಿತು ಕಾರ್ಯಕ್ರಮಗಳು ನಡೆಯಲಿವೆ.

# 28ನೇ ವಾರ್ಡ್‌ನಲ್ಲಿ ಎಸ್ಸೆಸ್ಸೆಂ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು 28ನೇ ವಾರ್ಡ್‌ನಲ್ಲಿ ಪ್ರಚಾರ ನಡೆಸುವರು. ಬೆಳಿಗ್ಗೆ 10-30 ಗಂಟೆಗೆ ಭಗತ್ ಸಿಂಗ್ ನಗರ, ಲೇಬರ್ ಕಾಲೋನಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಗೆ ಮನೆ ಮನೆಗೆ ತೆರಳಿ ಪ್ರಚಾರ ನಡೆಸುವರು.

# 25ನೇ ವಾರ್ಡಿನಲ್ಲಿ ಅಜಯ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ಅವರು 25ನೇ ವಾರ್ಡ್‌ನಲ್ಲಿ ಇಂದು ಪ್ರಚಾರ ನಡೆಸಲಿದ್ದಾರೆ.

ಬೆಳಿಗ್ಗೆ 8.30 ಕ್ಕೆ ಡಿ.ಸಿ.ಎಂ ಟೌನ್ ಶಿಫ್, ರಾಜನಹಳ್ಳಿ ಹನುಮಂತಪ್ಪ ಉದ್ಯಾನವನದ ವ್ಯಾಪ್ತಿ ಮತ್ತು ಸಂಜೆ 4.30 ಕ್ಕೆ ಕೆ.ಬಿ. ಬಡಾವಣೆ, ಗಣೇಶ ದೇವಸ್ಥಾನ, ದೀಕ್ಷಿತ್ ರಸ್ತೆ ವ್ಯಾಪ್ತಿಯಲ್ಲಿ ಮನೆ ಮನೆಗಳನ್ನು ಸಂಪರ್ಕಿಸಿ ಮತಯಾಚನೆ ನಡೆಸುವರು.

ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ ಭಾಗವಹಿಸಲಿದ್ದಾರೆ ಎಂದು ದಕ್ಷಿಣ ಮಂಡಲ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ ತಿಳಿಸಿದ್ದಾರೆ.

# ಜಗಳೂರಿಗೆ ನಾಳೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ



ಜಗಳೂರು, ಏ.28- ನಾಡಿದ್ದು ದಿನಾಂಕ 30 ರಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಲಿದ್ದು, ಪಟ್ಟಣದ ಬಯಲು ರಂಗಮಂದಿರದ ಆವರಣದ ವೇದಿಕೆ ಕಾರ್ಯಕ್ರಮದಲ್ಲಿ ನನ್ನ ಪರ ಚುನಾವಣೆ ಪ್ರಚಾರ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಅಭ್ಯರ್ಥಿ ಬಿ. ದೇವೇಂದ್ರಪ್ಪ ತಿಳಿಸಿದರು.

ತಾಲ್ಲೂಕಿನ ಹುಚ್ಚವ್ವನಹಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ಪಕ್ಷದಿಂದ ನಡೆಸಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷದಿಂದ ಗೆದ್ದು ಶಾಸಕರಾಗಿ ಅಧಿಕಾರ ಪಡೆದು, ಎರಡನೇ ಬಾರಿಯೂ ಟಿಕೆಟ್ ಪಡೆದು ಸೋಲು ಅನುಭವಿಸಿ ಕಾಂಗ್ರೆಸ್ ತೊರೆದು ಸ್ವಾರ್ಥಕ್ಕಾಗಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಎಚ್.ಪಿ.ರಾಜೇಶ್ ಅವರ ಬಂಡಾಯದ ಬಿಸಿ ತಟ್ಟುವುದಿಲ್ಲ ಎಂದರು.

ಕ್ಷೇತ್ರದಲ್ಲಿ ಈಗಾಗಲೇ 7 ಗ್ರಾಮ ಪಂಚಾಯಿತಿ ವ್ಯಾಪ್ತಿ ಪ್ರಚಾರ ನಡೆಸಲಾಗಿದ್ದು, ಕಾಂಗ್ರೆಸ್ ಪಕ್ಷಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ. ಬಿಜೆಪಿ ಅಭ್ಯರ್ಥಿ ಎಸ್.ವಿ.ರಾಮಚಂದ್ರ ಅವರೇ ನೇರ ಪ್ರತಿಸ್ಪರ್ಧಿ. ಪಕ್ಷೇತರ ಅಭ್ಯರ್ಥಿಯಲ್ಲ ಎಂದು ಹೇಳಿದರು.

ಕೆಪಿಸಿಸಿ ಎಸ್‌ಟಿ ಘಟಕದ ಅಧ್ಯಕ್ಷ ಕೆ.ಪಿ.ಪಾಲಯ್ಯ ಮಾತನಾಡಿ, ಮಾಜಿ ಶಾಸಕ ಎಚ್.ಪಿ.ರಾಜೇಶ್ ಅವರು ಕಾಂಗ್ರೆಸ್ ಬಾವುಟ ಹಿಡಿದಿರಲಿಲ್ಲ. ಪಕ್ಷ ಸಂಘಟನೆ ಮಾಡಿರಲಿಲ್ಲ. ಆದರೂ ಎರಡು ಬಾರಿ ಟಿಕೇಟ್ ನೀಡಿತ್ತು. ಪಕ್ಷದಿಂದ ಮೋಸವಾಗಿದೆ ಎಂಬ ಹೇಳಿಕೆಗಳು ಸತ್ಯಕ್ಕೆ ದೂರವಾದದ್ದು. ಪಕ್ಷಸಿದ್ಧಾಂತಕ್ಕೆ ಬದ್ಧವಾಗಿರಬೇಕು ಎಂದರು.

ಈ ಸಂದರ್ಭದಲ್ಲಿ ಕೆಪಿಸಿಸಿ ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಮುಖಂಡರಾದ ಶ್ಯಾಮ್ ರೆಡ್ಡಿ, ವಾಸಣ್ಣ, ರಂಗನಾಥ್ ರೆಡ್ಡಿ, ವೆಂಕಟೇಶ್, ಪ್ರಕಾಶ್, ಅಹಮ್ಮದ್ ಅಲಿ ಉಪಸ್ಥಿತರಿದ್ದರು.

# ಹರಿಹರ ತಹಶೀಲ್ದಾರ್ ಕಚೇರಿಯಲ್ಲಿ ಬಸವೇಶ್ವರ ಜಯಂತಿ



ಹರಿಹರ, ಏ. 28 - ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಬಸವೇಶ್ವರ ಜಯಂತಿಯನ್ನು ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಪೃಥ್ವಿ ಸಾನಿಕಂ, ಚುನಾವಣೆ ಅಧಿಕಾರಿ ಉದಯ್ ಕುಮಾರ್ ಕುಂಬಾರ, ಪೌರಾಯುಕ್ತ ಐಗೂರು ಬಸವರಾಜ್, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜೆ. ಶಿವಾನಂದಪ್ಪ, ಉಪಾಧ್ಯಕ್ಷ ಟಿ.ಜೆ.ಮುರುಗೇಶಪ್ಪ, ತಹಶೀಲ್ದಾರ್ ಶಶಿಧರಯ್ಯ, ಜಿ.ಕೆ. ವೀರಣ್ಣ, ಬಸವರಾಜಯ್ಯ, ಸೋಮಶೇಖರ್, ಪಾಟೀಲ್, ರುದ್ರಗೌಡ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀಮತಿ ಪದ್ಮಾವತಮ್ಮ ಎಂ. ಪಿ. ನಿಧನ



ದಾವಣಗೆರೆ ಪಿ.ಜೆ. ಬಡಾವಣೆಯ ವಾಸಿ

ದಿ॥ ಪಂಪಣ್ಣ ಎಂ.ಸಿ. ಇವರ ಧರ್ಮಪತ್ನಿ

**ಶ್ರೀಮತಿ ಪದ್ಮಾವತಮ್ಮ ಎಂ.ಪಿ.** (ಪುರಾಣದ ಪದ್ದಕ್ಕ)

ಅವರು, ದಿನಾಂಕ 28.04.2023 ರಂದು ಸಂಜೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಮೃತರಿಗೆ 88 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 29.04.2023ರ ಶನಿವಾರ ಬೆಳಿಗ್ಗೆ 10 ಗಂಟೆಯವರೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ಅಂತಿಮ ದರ್ಶನ ಪಡೆಯಬಹುದಾಗಿದೆ. ನಂತರ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಪ್ರಾಣೇಶ್ : 99806 50310, ಮಂಜುನಾಥ್ : 98446 36665**

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆಯ ಜಾಲಿನಗರದ ಎಲ್ಲಮ್ಮ ದೇವಿ ದೇವಸ್ಥಾನದ ಅಧ್ಯಕ್ಷರಾದ ಶಿವಕುಮಾರ್ ಅವರ ತಂದೆಯವರೂ, ಸಮಾಜ ಸೇವಕರಾದ ಶ್ರೀಮತಿ ಚೇತನಾ ಶಿವಕುಮಾರ್ ಅವರ ಮಾವನವರಾದ ಕಟ್ಟಿಗೆ ಡಿಪೋ

**ಗಣೇಶರಾವ್**

ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ.

**ಬಕ್ಕೇಶ ನಾಗನೂರು,**
ಹಿರಿಯ ಪತ್ರಕರ್ತರು

## 16ನೇ ವರ್ಷದ ಪುಣ್ಯಸ್ಮರಣೆ



**ದಿ॥ ಶ್ರೀಮತಿ ಜಯಂತಿದೇವಿ ಎಲ್.ಕೆ.**

ನೀವು ನಮ್ಮನ್ನಗಲಿ ಇಂದಿಗೆ
ಹದಿನಾರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆ
ಮತ್ತು ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿರುವ,

**ಪತಿ : ಲಿಂಗಂಪಲ್ಲಿ ಕೃಷ್ಣಮೂರ್ತಿ ಮತ್ತು ಕುಟುಂಬ**

## ಜಗದಯ್ಯ ಎಂ. ಪಿ. ಎಂ. ನಿಧನ



ದಾವಣಗೆರೆ ಎಸ್‌ಪಿಎಸ್ ನಗರ, 4ನೇ ಕ್ರಾಸ್ ವಾಸಿ ಜಗದಯ್ಯ ಎಂ.ಪಿ.ಎಂ. ಇವರು ದಿನಾಂಕ 28.4.2023ನೇ ಶುಕ್ರವಾರ ಮಧ್ಯಾಹ್ನ 12ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.04.2023 ರ ಶುಕ್ರವಾರ ಬೆಳಿಗ್ಗೆ 10ಕ್ಕೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

# ಹರಪನಹಳ್ಳಿ : ಕಾಂಗ್ರೆಸ್‌ಗೆ ಕಮ್ಯುನಿಸ್ಟ್ ಪಕ್ಷದ ಬೆಂಬಲ



**ಹರಪನಹಳ್ಳಿ**

ಹರಪನಹಳ್ಳಿ, ಏ.28- ರಾಜ್ಯದ 214 ವಿಧಾನಸಭಾ ಕ್ಷೇತ್ರಗಳಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಕೋಮುವಾದಿ ಬಿಜೆಪಿ ಸೋಲಿಸಲು, ಕಾಂಗ್ರೆಸ್ ಬೆಂಬಲಿಸಿ, ಸಿಪಿಐ ತಾಲೂಕು ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಕಾಂಗ್ರೆಸ್ ಅಭ್ಯರ್ಥಿ ಎನ್.ಕೊಟ್ರೇಶ್ ಅವರಿಗೆ ಬೆಂಬಲ ಪತ್ರ ನೀಡಿದರು.

ಪಟ್ಟಣದ ಆಚಾರ್ಯ ಬಡಾವಣೆಯಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಸಿಪಿಐ ಮುಖಂಡರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಸಮ್ಮುಖದಲ್ಲಿ ಕಾಂಗ್ರೆಸ್ ಬೆಂಬಲಿಸಿ ಮನವಿ ಪತ್ರ ನೀಡಿದರು.

ಈ ಸಂದರ್ಭದಲ್ಲಿ ಸಿಪಿಐ ತಾಲ್ಲೂಕು ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಮಾತನಾಡಿ ರಾಷ್ಟ್ರ, ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ಬಲಾಢ್ಯವಾಗಿ ಬೆಳೆದಿದ್ದು, ಅಭಿವೃದ್ಧಿ ಹೆಸರಿನಲ್ಲಿ ಬಿಜೆಪಿ ಸರ್ಕಾರ ರಾಜ್ಯವನ್ನು ಲೂಟಿ ಹೊಡೆದಿದೆ.

ರಾಜ್ಯದ ಉಳಿವಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸುತ್ತೇವೆ. ಹರಪನಹಳ್ಳಿಯಲ್ಲೂ ಸಹ ಜಿ. ಕರುಣಾಕರ ರೆಡ್ಡಿ ಅವರು ಕೆರೆಗಳನ್ನು ತುಂಬಿಸುವ ಬದಲು ಗುತ್ತಿಗೆದಾರರ ಜೇಬು ತುಂಬಿಸಿಕೊಳ್ಳುವ ಕೆಲಸ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಬಿಜೆಪಿ ತಿರಸ್ಕರಿಸುವಂತೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲುವಿಗೆ ಹಳ್ಳಿ ಹಳ್ಳಿಗಳಿಗೂ ತೆರಳಿ ಬಿಜೆಪಿ ಸರ್ಕಾರದ ವಿರುದ್ಧ ಪ್ರಚಾರ ಮಾಡುವುದಾಗಿ ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಮುಖಂಡರಾದ ಶಶಿಧರ ಪೂಜಾರ, ಡಾ.ಉಮೇಶಬಾಬು, ಎಚ್.ಕೆ.ಹಾಲೇಶ, ಹಾಲೇಶಗೌಡ, ಅಂಬಾಡಿ ನಾಗರಾಜ, ಬಳಿಗಾನೂರು ಕೊಟ್ರೇಶ, ರಮೇಶನಾಯ್ಕ, ನಟರಾಜಪ್ಪ, ಚಂದ್ರನಾಯ್ಕ, ಸೇರಿದಂತೆ ಇತರರಿದ್ದರು.

# ಜಗಳೂರಿನಲ್ಲಿ ವಿಜೃಂಭಣೆಯ ಶ್ರೀ ಮಾರಿಕಾಂಬಾ ದೇವಿ ರಥೋತ್ಸವ



ಜಗಳೂರು, ಏ.28- ಪಟ್ಟಣದ ಶ್ರೀ ದೊಡ್ಡ ಮಾರಿಕಾಂಬಾ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಇಂದು ಸಂಜೆ ವಿಜೃಂಭಣೆಯಿಂದ ರಥೋತ್ಸವ ಜರುಗಿತು.

ಸಂಜೆ ದೇವಾಲಯದಿಂದ ಹೊರಟ ದೇವಿಯ ರಥೋತ್ಸವದ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಂಚವಾದ್ಯ, ಡೊಳ್ಳು ಕುಣಿತ, ಚಂಡಿ ವಾದ್ಯ, ಗೊಂಬೆ ಕುಣಿತ, ನೃತ್ಯ ಮತ್ತು ವೇಷಭೂಷಣ ಮುಂತಾದ ಸಾಂಸ್ಕೃತಿಕ ವೈಭವ ಹಾಗೂ ಭಕ್ತರ ಜಯ ಘೋಷದೊಂದಿಗೆ ಸಾಗಿತು. ಮಾರ್ಗದುದ್ದಕ್ಕೂ ಭಕ್ತಾದಿಗಳು ರಥದ ಮೇಲೆ ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು.

ಮಾರಿಕಾಂಬಾ ದೇವಸ್ಥಾನದಿಂದ ಅರ್ಧ ಕಿಲೋಮೀಟರ್ ದೂರದ ಜಾತ್ರಾ ಗದ್ದುಗೆಗೆ ರಥವನ್ನು ಭಕ್ತಾದಿಗಳು ಸುಮಾರು ಒಂದು ತಾಸುಗಳ ಅವಧಿಯಲ್ಲಿ ಎಳೆದರು. ನಂತರ ಜಾತ್ರಾ ಗದ್ದುಗೆಯಲ್ಲಿ ದೇವಿಯನ್ನು ಪ್ರತಿಷ್ಠಾಪಿಸುವ ಕಾರ್ಯ ನೆರವೇರಿತು.

ರಥ ಬೀದಿಯುದ್ದಕ್ಕೂ ಸಾಮಾಜಿಕ ಕಾರ್ಯಕರ್ತರಿಂದ ಶರಬತ್, ಮಜ್ಜಿಗೆ, ಕುಡಿಯುವ ನೀರು ಸೇರಿದಂತೆ ವಿವಿಧ ಪಾನಿಯಗಳನ್ನು ಭಕ್ತರಿಗೆ ಪೂರೈಕೆ ಮಾಡಲಾಯಿತು. ಮಹಿಳೆಯರು, ವೃದ್ಧರು, ಮಕ್ಕಳು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

# ಮೋದಿ ವಿಷ ಸರ್ಪವಲ್ಲ ; ಪಾಕಿಸ್ತಾನ ವಿಷ ಸರ್ಪ : ಖರ್ಗೆಗೆ ಯತ್ನಾಳ್ ತಿರುಗೇಟು



ಹೂವಿನ ಹಡಗಲಿ, ಏ.28- ವಿಶ್ವ ಮೆಚ್ಚಿದ ನಾಯಕ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಹತ್ತು ಹಲವು ಜನಪರವಾದ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುವುದರಿಂದ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದರಿಂದ ಈ ಸಾಧನೆಯ ಹಿನ್ನೆಲೆಯ ಕಾರಣದಿಂದ ಬಿಜೆಪಿ ಪಕ್ಷಕ್ಕೆ ಬೆಂಬಲವನ್ನು ಕೊಟ್ಟು, ರಾಜ್ಯದಲ್ಲಿ ಮತ್ತೆ ಸರ್ಕಾರ ಸ್ಥಾಪನೆಗೆ ತಾವೆಲ್ಲಾ ಕೈಜೋಡಿಸಬೇಕೆಂದು ಬಿಜೆಪಿ ವರಿಷ್ಠ ಬಸನಗೌಡ ಪಾಟೀಲ್ ಯತ್ನಾಳ್ ಕರೆ ನೀಡಿದರು.

ತಾಲ್ಲೂಕಿನ ಮಾನ್ಯರ ಮಸಲವಾಡ ಮತ್ತು ನಾಗತಿ ಬಸಾಪುರ ಗ್ರಾಮದಲ್ಲಿ ರೋಡ್ ಶೋ ಮೂಲಕ ಅಭ್ಯರ್ಥಿ ಶ್ರೀಕೃಷ್ಣ ನಾಯಕ ಅವರ ಪರವಾಗಿ ಮತ ಯಾಚನೆಯನ್ನು ಮಾಡಿ ಅವರು ಮಾತನಾಡಿದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ವಿಷ ಸರ್ಪ ಎಂದು ಟೀಕಿಸಿದ್ದಾರೆ. ಆದರೆ, ನಿಜವಾದ ವಿಷ ಸರ್ಪ ಪಾಕಿಸ್ತಾನ. ಅದರ ಬಗ್ಗೆ ಟೀಕೆ ಮಾಡಲಿ ಎಂದು ತಿರುಗೇಟನ್ನು ಕೊಟ್ಟರು.

ಕಾಂಗ್ರೆಸ್ ಪಕ್ಷ ಗ್ಯಾರಂಟಿ ಯೋಜನೆಗಳನ್ನು ಪ್ರಕಟಿಸಿದೆ. ಆದರೆ, ಅವುಗಳ ವಾರೆಂಟಿ ಈಗಾಗಲೇ ಮುಗಿದುಹೋಗಿದೆ. ಗ್ಯಾರಂಟಿನೇ ಇಲ್ಲ. ಇದೇ ರೀತಿ ರಾಜಸ್ಥಾನದಲ್ಲಿ ಗ್ಯಾರಂಟಿಗಳನ್ನು ಕೊಟ್ಟು ಅಲ್ಲಿ ಏನೂ ಮಾಡಲಿಲ್ಲ. ಇದನ್ನು ಹಡಗಲಿ ಕ್ಷೇತ್ರದ ಮತದಾರರು ಅರ್ಥ ಮಾಡಿಕೊಂಡು ನಮ್ಮ ಪಕ್ಷದ ಯುವಕ, ವಿದ್ಯಾವಂತ ಅಭ್ಯರ್ಥಿ ಕೃಷ್ಣ ನಾಯಕ್ ಅವರಿಗೆ ಮತವನ್ನು ಕೊಟ್ಟು ಗೆಲ್ಲಿಸುವುದರ ಮೂಲಕ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಕಾರಣೀಭೂತರಾಗಬೇಕು ಎಂದು ಕರೆ ನೀಡಿದರು.

ಇದಕ್ಕೂ ಮೊದಲು ಮಾತನಾಡಿದ ಅಭ್ಯರ್ಥಿ ಕೃಷ್ಣ ನಾಯಕ, ಹಡಗಲಿ ಕ್ಷೇತ್ರದಲ್ಲಿ ಭ್ರಷ್ಟಾಚಾರ ಸ್ವಜನ ಪಕ್ಷಪಾತ ಸೇರಿದಂತೆ ದುರಂಹಕಾರ, ಅಧಿಕಾರ ದುರುಪಯೋಗ ನಡೆಯುತ್ತಿದೆ. ಜನಸಾಮಾನ್ಯರು ರೋಸಿ ಹೋಗಿದ್ದಾರೆ. ಇಲ್ಲಿನ ಶಾಸಕ ಪಿ.ಟಿ.ಪರಮೇಶ್ವರ ನಾಯ್ಕ ಇದಕ್ಕೆ ಕಾರಣವಾಗಿದ್ದಾರೆ. ಹಾಗಾಗಿ ಅವರನ್ನ ಬೆಂಬಲಿಸದೆ, ಮತ ಬಾಂಧವರು ಬಿಜೆಪಿ ಪಕ್ಷಕ್ಕೆ ಮತವನ್ನು ಕೊಟ್ಟು ಹೊಸ ಬದಲಾವಣೆಯನ್ನು ತರಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ನಂದಿಹಳ್ಳಿ ಹಾಲಪ್ಪ, ಬಿ.ಚಂದ್ರ ನಾಯಕ, ಪರಾಜಿತ ಅಭ್ಯರ್ಥಿ ಓದೋ ಗಂಗಪ್ಪ, ಮುಖಂಡ ಪಿ. ವಿಜಯಕುಮಾರ್, ಮಂಡಲ ಅಧ್ಯಕ್ಷ ಸಂಜೀವ ರೆಡ್ಡಿ ಸೇರಿದಂತೆ ಅನೇಕರು ಈ ಪಾಲ್ಗೊಂಡಿದ್ದರು. ಆನಂದ ಬಸನಗೌಡ ಪಾಟೀಲರಿಗೆ ಕಮಲದ ಹೂವನ್ನು ಉಡುಗೊರೆಯಾಗಿ ನೀಡಿ ಗಮನ ಸೆಳೆದರು.

## ಸೋನಿಯಾ ವಿಷಕನ್ಯೆ ಎಂದ ಯತ್ನಾಳ್ ಉಚ್ಚಾಟಿಸಿ: ಕಾಂಗ್ರೆಸ್

ನವದೆಹಲಿ, ಏ. 28 – ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ವಿಷಕನ್ಯೆ ಎಂದು ಹೇಳಿರುವ ಬಿಜೆಪಿ ನಾಯಕ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಯತ್ನಾಳ್ ಹೇಳಿಕೆಯನ್ನು ಖಂಡಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ, ರಾಜ್ಯ ಬಿಜೆಪಿ ಹಾಗೂ ಅದರ ನಾಯಕರು ಮಾನಸಿಕ ಸಮತೋಲನ ಕಳೆದುಕೊಂಡಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆಯಂತೆ ಯತ್ನಾಳ್ ಈ ರೀತಿ ಮಾತನಾಡಿದ್ದಾರೆ ಎಂದು ಆರೋಪಿಸಿದರು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ವಿಷದ ಹಾವು ಎಂದಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಖಂಡಿಸಿದ್ದ ಯತ್ನಾಳ್, ಸೋನಿಯಾ ಗಾಂಧಿ ಅವರನ್ನು ವಿಷಕನ್ಯೆಗೆ ಹೋಲಿಸಿದ್ದರು.

# ಭೂಮಿಯನ್ನೇ ಸ್ವರ್ಗ ಮಾಡುವ ವಿಶ್ವಕರ್ಮ ಸಮಾಜ

## ಮಲೇಬೆನ್ನೂರು : ಕಾಳಿಕಾದೇವಿಯ ಶಿಲಾಮೂರ್ತಿ ಪ್ರತಿಷ್ಠಾಪನೆಯಲ್ಲಿ ಶ್ರೀ ಕಾಳಹಸ್ತೇಂದ್ರ ಸ್ವಾಮೀಜಿ



ಮಲೇಬೆನ್ನೂರು, ಏ. 28- ಭೂಮಿಯನ್ನೇ ಸ್ವರ್ಗ ಮಾಡುವ ತಾಕತ್ತು ವಿಶ್ವಕರ್ಮ ಸಮಾಜಕ್ಕಿದೆ ಎಂದು ಯಾದಗಿರಿ ಜಿಲ್ಲೆಯ ಶ್ರೀಮದಾನೆಗೊಂದಿ ಸಂಸ್ಥಾನ ಸರಸ್ವತಿ ಪೀಠದ ಶ್ರೀ ಕಾಳಹಸ್ತೇಂದ್ರ ಸ್ವಾಮೀಜಿ ಹೇಳಿದರು.

ಪಟ್ಟಣದ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಜಗನ್ಮಾತೆ ಶ್ರೀ ಕಾಳಿಕಾದೇವಿಯ ನೂತನ ಶಿಲಾಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ವಿಶ್ವಕರ್ಮ ವಟುಗಳ ಸಾಮೂಹಿಕ ಉಪನಯನ, ಜವಳ ಮತ್ತು ಸಾಮೂಹಿಕ ವಿವಾಹ ಮಹೋತ್ಸವದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಕಾಯಕ ಮಾಡುವ ವರ್ಗಗಳ ಜನರಿಂದಾಗಿ ಸುಂದರ ಜಗತ್ತು ನಿರ್ಮಾಣವಾಗಿದೆ. ಅಂತಹ ವರ್ಗಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸ ಆಗಬೇಕಿದ್ದು, ವಿಶ್ವಕರ್ಮ ಸಮಾಜದವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದಕ್ಕೆ ಆದ್ಯತೆ ನೀಡಬೇಕೆಂದರು.

ಈ ದಿನ ಉಪನಯನ ಪಡೆದ ಮಕ್ಕಳು ನಮ್ಮ ಸಮಾಜದ ಆಚಾರ-ವಿಚಾರಗಳನ್ನು ಮೈಗೂಡಿಸಿ ಕೊಂಡು ವಿಶ್ವಕರ್ಮ ಧರ್ಮದ ಜ್ಯೋತಿ ಬೆಳಗುವಂತಾಗಬೇಕೆಂದು ಕಿವಿಮಾತು ಹೇಳಿದ ಸ್ವಾಮೀಜಿ ಅವರು, ಗಾಯತ್ರಿ ಮಂತ್ರ ಎಲ್ಲಾ ಮಂತ್ರಗಳ ತಾಯಿಯಾಗಿದ್ದು, ಪ್ರತಿನಿತ್ಯ ಎಲ್ಲರೂ ಗಾಯತ್ರಿ ಮಂತ್ರ ಪಠಣ ಮಾಡಿ ಎಂದರು.

ವಿಶ್ವಕರ್ಮ ಸಮಾಜದ ಕೆ.ಎನ್. ವೀರಾ ಚಾರ್, ಬಸಾಪುರದ ನಾಗೇಂದ್ರಚಾರ್, ಎಸ್. ರುದ್ರಾಚಾರ್, ಮಲ್ಲಿಕಾರ್ಜುನಚಾರ್, ಗಂಗಾಧರ ಚಾರ್, ಜಗನ್ನಾಥ್ ಚಾರ್, ನ್ಯಾಮತಿ ನಾಗರಾಜ್, ಶಿಲಾಮೂರ್ತಿ ಶಿಲ್ಪಿ ಕೇಶವಾಚಾರ್, ನಂದಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ. ವೀರಯ್ಯ, ಹರಳಹಳ್ಳಿ ಸುರೇಶಚಾರ್, ಜಿಗಳಿಯ ಶಂಕರ ಚಾರ್, ಬಿ. ನಿಂಗಾಚಾರಿ, ಬಿ. ಹೊನ್ನಾಚಾರಿ, ಮಾಲತೇಶ ಚಾರಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ವಿ. ಆನಂದಚಾರ್ ಸ್ವಾಗತಿಸಿದರು. ಬೆಸ್ಕಾಂ ಗುತ್ತಿಗೆದಾರ ಪ್ರಕಾಶಚಾರ್ ಪ್ರಾಸ್ತಾವಿಕ ನುಡಿಗಳ ನ್ನಾಡಿದರು. ಶ್ರೀನಿವಾಸಚಾರ್ ವಂದಿಸಿದರು.

## ಪರಿಹಾರ ನೀಡಲು ಬೈಜುಸ್, ನಟ ಶಾರುಕ್‌ಗೆ ಆದೇಶ

ಇಂದೋರ್, ಏ. 28 – ಐ.ಎ.ಎಸ್. ಅಧಿಕಾರಿಯಾಗುವ ತರಬೇತಿ ಪಡೆಯಲು ಮಹಿಳೆಯೊಬ್ಬರಿಗೆ ಪರಿಹಾರ ನೀಡುವಂತೆ ಬೈಜುಸ್ ಶಿಕ್ಷಣ ಕಂಪನಿ ಹಾಗೂ ನಟ ಶಾರುಕ್ ಖಾನ್‌ಗೆ ಮಧ್ಯ ಪ್ರದೇಶದ ಇಂದೋರ್‌ನ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ತಿಳಿಸಿದೆ.

ಪ್ರಿಯಾಂಕ ದೀಕ್ಷಿತ್ ಅವರು 2021ರಲ್ಲಿ ಪ್ರವೇಶ ಪಡೆದಿದ್ದರು. ಇದಕ್ಕಾಗಿ ಪಾವತಿಸಿದ 1.08 ಲಕ್ಷ ರೂ.ಗಳ ಶುಲ್ಕವನ್ನು ಶೇ.12ರ ಬಡ್ಡಿಯೊಂದಿಗೆ ವಾಪಸ್ ನೀಡಬೇಕು. ಖಟ್ಲೆ ವೆಚ್ಚವಾಗಿ 5 ಸಾವಿರ ರೂ. ಹಾಗೂ ಪರಿಹಾರವಾಗಿ 50 ಸಾವಿರ ರೂ. ನೀಡಬೇಕು ಎಂದು ಆದೇಶಿಸಲಾಗಿದೆ.

ಬೈಜುಸ್‌ನ ಸ್ಥಳೀಯ ವ್ಯವಸ್ಥಾಪಕ ಹಾಗೂ ನಟ ಖಾನ್ ಜಂಟಿಯಾಗಿ ಹಾಗೂ ಪ್ರತ್ಯೇಕವಾಗಿ ಪರಿಹಾರ ನೀಡಬೇಕೆಂದು ತಿಳಿಸಲಾಗಿದೆ. ಉಭಯರೂ ಪ್ರಕರಣದಲ್ಲಿ ಸಹಭಾಗಿಗಳ ರೀತಿಯಲ್ಲಿ ಪರಿಹಾರ ನೀಡಬೇಕೆಂದು ಆಯೋಗ ಹೇಳಿದೆ.

ಈ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗಲು ಸ್ಥಳೀಯ ವ್ಯವಸ್ಥಾಪಕ ಹಾಗೂ ನಟ ಖಾನ್ ಅವರಿಬ್ಬರಿಗೂ ಹಲವು ಬಾರಿ ನೋಟಿಸ್ ಕಳಿಸಲಾಗಿತ್ತು. ಈ ಬಗ್ಗೆ ಅವರು ಯಾವುದೇ ಉತ್ತರ ದಾಖಲಿಸಿಲ್ಲ. ಅವರ ಗೈರಿನಲ್ಲಿ ವಿಚಾರಣೆ ನಡೆಸಿ ಆದೇಶ ಹೊರಡಿಸಲಾಗಿದೆ.

ತಪ್ಪು ದಾರಿಗೆಳೆಯುವ ಆನ್‌ಲೈನ್ ಜಾಹೀರಾತಿನ ಮೂಲಕ ಬೈಜುಸ್ ಕೋರ್ಸ್‌ಗೆ ಪ್ರವೇಶ ಪಡೆಯುವಂತೆ ಉತ್ತೇಜನ ನೀಡಲಾಗಿತ್ತು. ಆದರೆ, ಯಾವುದೇ ಬೋಧನಾ ವ್ಯವಸ್ಥೆ ಕಲ್ಪಿಸಿರಲಿಲ್ಲ. ಹಣ ಮರಳಿಸುವುದಾಗಿ ಹೇಳಲಾಗಿತ್ತಾದರೂ, ಆ ಬಗ್ಗೆ ಕ್ರಮ ತೆಗೆದುಕೊಂಡಿರಲಿಲ್ಲ. ಇದು ಅನುಚಿತ ವ್ಯಾಪಾರ ಪದ್ಧತಿ ಎಂದು ದೂರು ದಾಖಲಿಸಲಾಗಿತ್ತು.

ಚಿತ್ರನಟನ ಜಾಹೀರಾತಿನಿಂದ ಪ್ರಚೋದಿತರಾಗಿ ಬೈಜುಸ್ ಕೋರ್ಸ್‌ಗೆ ಸೇರ್ಪಡೆಯಾಗಿದ್ದೆ ಎಂದು ದೀಕ್ಷಿತ್ ಅವರು ದೂರಿನಲ್ಲಿ ತಿಳಿಸಿದ್ದರು.

## ಬಿಜೆಪಿ ರಾಜ್ಯವನ್ನು ಸುರಕ್ಷಿತಗೊಳಿಸಿದೆ

**(1ನೇ ಪುಟದಿಂದ)** ಖರ್ಗೆ ಅವರು ಮೋದೀಜಿ ವಿಷದ ಹಾವು ಎಂದಿದ್ದಾರೆ.

ಕೇವಲ ಖರ್ಗೆ ಅಷ್ಟೇ ಅಲ್ಲ, ಗಾಂಧಿ ಪರಿವಾರವೇ ಪ್ರಧಾನಿ ಮೋದಿ ಅವರನ್ನು ಅವಮಾನಿಸುತ್ತಾ ಬಂದಿದೆ ಎಂದವರು ತರಾಟೆಗೆ ತೆಗೆದುಕೊಂಡರು.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಪ್ರಧಾನಿಯನ್ನು ಮೌತ್ ಕಾ ಸೌದಾಗರ್ ಎಂದಿದ್ದರು. ರಾಹುಲ್ ಗಾಂಧಿ ಅವರು ಸರ್ಜಿಕಲ್ ಸ್ಟ್ರೈಕ್ ಪ್ರಶ್ನಿಸಿದ್ದರು. ಪ್ರಿಯಾಂಕ ಗಾಂಧಿ ಅವರು ಪ್ರಧಾನಿ ನೀಚ ಎಂದಿದ್ದರು ಎಂದು ಅಮಿತ್ ಷಾ ಆಕ್ರೋಶ ವ್ಯಕ್ತಪಡಿಸಿದರು.

ನೀವು ಪ್ರಧಾನಿಯವರನ್ನು ಎಷ್ಟು ಬೇಕೋ ಅಷ್ಟು ನಿಂದಿಸಿರಿ. ಇದರಿಂದ ಏನೂ ವ್ಯತ್ಯಾಸ ವಾಗುವುದಿಲ್ಲ. ನೀವು ನಿಂದಿಸಿದಷ್ಟು ಕಮಲ ದೊಡ್ಡದಾಗಿ ಅರಳಲಿದೆ. ಈ ರೀತಿಯ ಮಾತ ನಾಡುವ ಕಾಂಗ್ರೆಸ್‌ಗೆ ಅಧಿಕಾರ ಕೊಡಬಾರದು ಎಂದು ಅಮಿತ್ ಷಾ ಹೇಳಿದರು. ಅಮಿತ್ ಷಾ ಅವರು ತಮ್ಮ ಮಾತುಗಳನ್ನು ಆರಂಭಿಸುವ ವೇಳೆ ಹರಿಹರೇಶ್ವರ ಹಾಗೂ ಉಕ್ಕಡಗಾತ್ರಿ ಅಜ್ಜಯ್ಯನಿಗೆ ನಮಸ್ಕರಿಸಿದರು. ಪಂಚಮ ಸಾಲಿ, ವೇಮನ, ವಾಲ್ಮೀಕಿ ಹಾಗೂ ಕಾಗಿನೆಲೆ ಪೀಠಗಳಿಗೆ ನಮಸ್ಕರಿಸುವುದಾಗಿ ತಿಳಿಸಿದರು.

### ಸಿಎಂ ಆಗಲು ಆಂತರಿಕ ಸಂಘರ್ಷ

**ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಆಂತರಿಕ ಸಂಘರ್ಷ ನಡೆದಿದೆ. ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹೊಸ ಬಟ್ಟೆ ಹೋಲಿಸಿಕೊಂಡಿದ್ದಾರೆ. ಕಾಂಗ್ರೆಸ್ ನಾಯಕ ಸಿದ್ದ ರಾಮಯ್ಯ ಸ್ಪರ್ಧೆಯಲ್ಲಿದ್ದಾರೆ. ಈಗ ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಬಂದಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಲೇವಡಿ ಮಾಡಿದರು. ಆದರೆ, ಇವರು ಜಗಳ ಮಾಡಬಾರದು. ಏಕೆಂದರೆ ಕಾಂಗ್ರೆಸ್‌ಗೆ ಬಹುಮತವೇ ಬರುವುದಿಲ್ಲ. ಬಿಜೆಪಿಯವರೇ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಷಾ ಹೇಳಿದರು.**

### ಅಯೋಧ್ಯೆಗೆ ಟಿಕೆಟ್ ಸಿದ್ಧ ಮಾಡಿಕೊಳ್ಳಿ

ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಅಯೋಧ್ಯೆಯ ರಾಮ ಮಂದಿರ ತಡೆದಿತ್ತು. ಆದರೆ, ಸುಪ್ರೀಂ ಕೋರ್ಟ್ ತೀರ್ಪು ಬಂದ ತಕ್ಷಣವೇ ಮೋದಿ ಸರ್ಕಾರ ರಾಮ ಮಂದಿರ ನಿರ್ಮಾಣ ಆರಂಭಿಸಿದೆ. 2024ರಲ್ಲಿ ಭವ್ಯ ರಾಮ ಮಂದಿರ ಸಿದ್ಧವಾಗಲಿದೆ. ಅಲ್ಲಿಗೆ ತೆರಳಲು ಟಿಕೆಟ್ ಸಿದ್ಧ ಮಾಡಿಕೊಳ್ಳಿ ಎಂದು ಬಿಜೆಪಿ ನಾಯಕ ಅಮಿತ್ ಷಾ ಹೇಳಿದರು.

ಕಾಶಿ ವಿಶ್ವನಾಥ ಮಂದಿರದ ಕಾರಿಡಾರ್ ನವೀಕರಣ, ಬದರೀನಾಥ – ಕೇದಾರನಾಥ ಮರು ನಿರ್ಮಾಣ, ಸೋಮನಾಥ ಮಂದಿರ ಬಂಗಾರದಿಂದ ನಿರ್ಮಿಸುವುದೂ ಸೇರಿದಂತೆ ಎಲ್ಲೆಡೆ ನಮ್ಮ ಸಾಂಸ್ಕೃತಿಕ ವೈಭವ ಬೆಳಗುವ ಕೆಲಸವಾಗುತ್ತಿದೆ ಎಂದವರು ತಿಳಿಸಿದರು.

## ಮಕ್ಕಳನ್ನು ಅಪಾಯಕಾರಿ ಉದ್ದಿಮೆಯಲ್ಲಿ ನಿಯೋಜಿಸುವುದು ನಿಷೇಧ

ದಾವಣಗೆರೆ, ಏ. 28 - ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಯಾವುದೇ ಪಕ್ಷಗಳು ಮತ್ತು ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಉದ್ಯೋಗ ಮತ್ತು ಚುನಾವಣಾ ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುವುದನ್ನು ನಿಷೇಧಿಸಲಾಗಿದೆ.

14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದು, 14 ರಿಂದ 18 ರ ವಯಸ್ಸಿನ ಕಿಶೋರ ಕಾರ್ಮಿಕ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ಬಳಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಒಂದು ವೇಳೆ ಯಾವುದೇ ಪಕ್ಷಗಳು ಮತ್ತು ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಬಳಸಿಕೊಂಡಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಬಾಲ ಕಾರ್ಮಿಕ ಯೋಜನಾ ಸೊಸೈಟಿಯ ಅಧ್ಯಕ್ಷರಾದ ಶಿವಾನಂದ ಕಾಪಶಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಬೇಸಿಗೆಯ ಹಿನ್ನೆಲೆಯಲ್ಲಿ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ದಾನಿಗಳ ನೆರವಿನೊಂದಿಗೆ 1 ತಿಂಗಳ ಪರ್ಯಂತ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಶ್ರೀ ಜಯದೇವ ಮುರುಘ ರಾಜೇಂದ್ರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಡಾ. ಜಿ. ಸಿದ್ದೇಶ್ ಮತ್ತು ಡಾ. ಅಂಜಲಿ ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.

# ಆಸೆ, ಆಮಿಷಗಳಿಗೆ ಬಲಿಯಾಗದೇ ಸಜ್ಜನರನ್ನು ಗೆಲ್ಲಿಸಿ

## ಮಲೇಬೆನ್ನೂರು ಧಾರ್ಮಿಕ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳ ಕರೆ





ಮಲೇಬೆನ್ನೂರು, ಏ. 28- ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯ ಕಾವು ಏರುತ್ತಿದ್ದು, ಅಧಿಕಾರಕ್ಕಾಗಿ ರಾಜಕೀಯ ಪಕ್ಷಗಳು ಏನೆಲ್ಲಾ ಆರೋಪ-ಪ್ರತ್ಯಾರೋಪ ಮಾಡುತ್ತಿವೆ. ನೀವು ಮಾತ್ರ ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗದೇ ಸಜ್ಜನರನ್ನು ಆಯ್ಕೆ ಮಾಡಿ ಎಂದು ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಜನತೆಗೆ ಕಿವಿಮಾತು ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ 3 ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಮೊನ್ನೆ ಹಮ್ಮಿಕೊಂಡಿದ್ದ ಇಷ್ಟಲಿಂಗ ಮಹಾಪೂಜೆ ನೆರವೇರಿಸಿ ಶ್ರೀಗಳು ಆಶೀರ್ವಚನ ನೀಡಿದರು.

ನಾಡಿನ ಹಾಗೂ ಜನರ ಹಿತಕಾಯುವ ಮತ್ತು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವ, ಕಷ್ಟಕ್ಕೆ ಸ್ಪಂದಿಸುವ ಮನೋಭಾವ ಹೊಂದಿರುವ, ಧರ್ಮ ರಕ್ಷಣೆ, ಸಮಾಜದಲ್ಲಿ ಶಾಂತಿ, ಸಾಮರಸ್ಯ ಕಾಪಾಡುವ ನಾಯಕನನ್ನು ನಿಮ್ಮ ಮತದಾನದಿಂದ ಗೆಲ್ಲಿಸಿ ಎಂದು ಸ್ವಾಮೀಜಿ ಕರೆ ನೀಡಿದರು.

ಕಲಿಯುಗದಲ್ಲಿ ನೀವು ಏನೇ ಮಾಡಿದರೂ ದೇವರು ಪ್ರತ್ಯಕ್ಷವಾಗುವುದಿಲ್ಲ. ಆದರೆ ಗುರು-ಹಿರಿಯರಲ್ಲಿ ನೀವು ತೋರಿಸುವ ನಿಜವಾದ ಭಕ್ತಿ, ಆಚರಣೆಗಳಿಂದಾಗಿ ದೇವರನ್ನು ಕಾಣಬಹುದು. ಭಾರತದ ಸನಾತನ ಸಂಸ್ಕೃತಿಯಲ್ಲಿ ಮೂರುವರೆ ಮುಹೂರ್ತಕ್ಕೆ ವಿಶೇಷ ಮನ್ನಣೆ ಇದ್ದು, ಹಾಗಾಗಿ ಯುಗಾದಿ, ವಿಜಯದಶಮಿ, ದೀಪಾವಳಿ, ಅಕ್ಷಯ ತೃತೀಯ, ಬಸವೇಶ್ವರರ ಜಯಂತಿಗಳು ವಿಶೇಷ ಸ್ಥಾನಮಾನ ಪಡೆದುಕೊಂಡಿವೆ. ಈ ದಿನ ಎಲ್ಲಾ ಕಡೆ ಶುಭ ಸಮಾರಂಭಗಳು ಹೆಚ್ಚಾಗಿ ನಡೆಯುತ್ತವೆ ಎಂದು ಶ್ರೀಗಳು ವಿವರಿಸಿದರು.

ಜಿಗಳಿ ಕ್ಯಾಂಪಿನ ಕಾಲಜ್ಞಾನಿ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಬಿ.ಜಿ. ಅಜಯ್ ಕುಮಾರ್, ಎನ್.ಎ. ಮುರುಗೇಶ್ ಆರಾಧ್ಯ, ವಿನಾಯಕ ಬಸ್ ಮಾಲೀಕ ಹರೀಶ್, ಹಿರಿಯರಾದ ಅಥಣಿ ವೀರಣ್ಣ, ದೇವಸ್ಥಾನ ಟ್ರಸ್ಟ್ ಕಮಿಟಿಯ ಅಧ್ಯಕ್ಷ ಬಿ. ಪಂಚಪ್ಪ, ಬಿ. ನಾಗೇಂದ್ರಪ್ಪ, ಬಿ. ಚಿದಾನಂದಪ್ಪ, ಎನ್.ಕೆ. ವೃಷಭೇಂದ್ರಪ್ಪ, ಬಿ.ವಿ. ರುದ್ರೇಶ್, ಬಿ. ಮಹಾರುದ್ರಪ್ಪ, ಬಿ. ಮಲ್ಲಿಕಾರ್ಜುನ್, ಬಿ. ಶಂಭುಲಿಂಗಪ್ಪ, ಜಿಗಳಿಯ ಜಿ. ಆನಂದಪ್ಪ, ಕುಂಬಳೂರು ವಾಸು, ಪಿ.ಹೆಚ್. ಶಿವಕುಮಾರ್, ಭೋವಿಕುಮಾರ್, ನಂದಿಗಾವಿ ರಾಜೀವ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಖರ್ಗೆ ವಿರುದ್ಧ ಆಯೋಗಕ್ಕೆ ದೂರು ನೀಡಿದ ಬಿಜೆಪಿ

ನವದೆಹಲಿ, ಏ. 28 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ವಿಷದ ಹಾವು ಎಂದಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಪ್ರಕರಣ ದಾಖಲಿಸುವಂತೆ ಚುನಾವಣಾ ಆಯೋಗಕ್ಕೆ ಬಿಜೆಪಿ ಮನವಿ ಸಲ್ಲಿಸಿದೆ.

ಕೇಂದ್ರ ಸಚಿವ ಭೂಪೇಂದ್ರ ಯಾದವ್ ನೇತೃತ್ವದ ಬಿಜೆಪಿ ನಿಯೋಗ ಈ ಮನವಿ ಸಲ್ಲಿಸಿದೆ. ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಯಾದವ್, ಖರ್ಗೆ ಕೇವಲ ಬಾಯ್ತಪ್ಪಿನಿಂದ ಮಾತನಾಡಿಲ್ಲ. ಇದು ಕಾಂಗ್ರೆಸ್‌ನ ದ್ವೇಷದ ರಾಜಕೀಯ ಎಂದು ಆರೋಪಿಸಿದರು.

ಪ್ರಧಾನಿ ಮೋದಿ ವಿರುದ್ಧ ವೈಯಕ್ತಿಕ ದಾಳಿ ನಡೆಸುವ ಇತಿಹಾಸವನ್ನೇ ಕಾಂಗ್ರೆಸ್ ಹೊಂದಿದೆ ಎಂದು ಯಾದವ್ ಹೇಳಿದರು. ಖರ್ಗೆ ವಿರುದ್ಧ ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಿಸಬೇಕು. ಅವರು ಉದ್ದೇಶಪೂರ್ವಕವಾಗಿ ಪ್ರಚೋದನ ಕಾರಿಯಾಗಿ ಮಾತನಾಡಿದ್ದಾರೆ ಎಂದು ಬಿಜೆಪಿ ನಿಯೋಗ ಸಲ್ಲಿಸಿದ ಮನವಿಯಲ್ಲಿ ಹೇಳಲಾಗಿದೆ.

## 'ಸ್ನೇಹ' ಮಹಿಳಾ ಬಳಗದಿಂದ ಮತದಾನ ಜಾಗೃತಿ



ದಾವಣಗೆರೆ, ಏ. 28 - 'ಸ್ನೇಹ' ಮಹಿಳಾ ಬಳಗದ ವತಿಯಿಂದ ಮತದಾನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಸ್ನೇಹ ಬಳಗದ ಆಜೀವ ಗೌರವ ಅಧ್ಯಕ್ಷರಾದ ಶ್ರೀಮತಿ ಮಂಜುಳ ನಿಂಗಪ್ಪ, ಗೌರವ ಅಧ್ಯಕ್ಷರಾದ ಮಂಜುಳ ಬಸವಲಿಂಗಪ್ಪ, ಚೇತನ ಲಿಂಗರಾಜ್, ಕವಿತ ರಾಜ್, ಪುಣ್ಯ ಮಂಜುನಾಥ್, ಸ್ನೇಹ ಬಳಗದ ಪದಾಧಿಕಾರಿಗಳು, ಸದಸ್ಯೆಯರು ಹಾಗೂ ಮಹಾನಗರ ಪಾಲಿಕೆಯ ಸದಸ್ಯ ಮಂಜುನಾಥ್ ಗಡಿಗುಡಾಳು ಹಾಗು ಅನೇಕರು ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ರವರು ಸ್ನೇಹ ಮಹಿಳಾ ಬಳಗದ ಸದಸ್ಯರೊಂದಿಗೆ ಸಂವಾದ ಕಾರ್ಯಕ್ರಮ ನಡೆಸಿ, ಎಸ್.ಎಸ್.ಮಲ್ಲಿಕಾರ್ಜುನ್ ರವರ ಪರವಾಗಿ ಮತ ಯಾಚನೆ ಮಾಡಿದರು.

## ನಗರದಲ್ಲಿ ಇಂದು ಚಾಣಕ್ಯ ಸಂಸ್ಕೃತಿ ಸೌರಭ

ಚಾಣಕ್ಯ ಪದವಿ ಪೂರ್ವ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಆಶ್ರಯದಲ್ಲಿ ಪ್ರೇರಣಾ ಅಕಾಡೆಮಿ ಸಹಯೋಗದಲ್ಲಿ ಚಾಣಕ್ಯ ಸಂಸ್ಕೃತಿ ಸೌರಭ-23 ಕಾರ್ಯಕ್ರಮವನ್ನು ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಡಾ. ಕೆ. ಶಿವಶಂಕರ್ ಉದ್ಘಾಟಿಸುವರು. ನಾಗರಾಜ ಶೆಟ್ಟಿ ಡಿ.ವಿ. ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರಭಾವತಿ ಶೇತಸನದಿ, ಶ್ರೀಮತಿ ರೂಪ ನಾಗರಾಜ ಶೆಟ್ಟಿ ಭಾಗವಹಿಸುವರು.

## ನಗರದಲ್ಲಿ ಇಂದು ಮಕ್ಕಳ ಸಂತೆ ಸ್ಪರ್ಧೆ

ಅನ್ವೇಷಕರು ಆರ್ಟ್ ಫೌಂಡೇಶನ್ ವತಿಯಿಂದ ಹಮ್ಮಿಕೊಂಡಿರುವ 7 ನೇ ವರ್ಷದ ಮಕ್ಕಳ ಬೇಸಿಗೆ ಶಿಬಿರದ ಪ್ರಯುಕ್ತ ಇಂದು ಬೆಳಿಗ್ಗೆ 9.30 ರಿಂದ 1.30 ರವರೆಗೆ ವಿಶ್ವವಿದ್ಯಾನಿಲಯ ದೃಶ್ಯ ಕಲಾ ಮಹಾವಿದ್ಯಾಲಯದ ಆವರಣ ದಲ್ಲಿ ಮಕ್ಕಳ ಸಂತೆಯನ್ನು ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರು ತಮ್ಮ ಮಕ್ಕಳೊಂದಿಗೆ ಭಾಗವಹಿಸಬಹುದು.ಮೇ 1 ರಂದು ಮಕ್ಕಳಿಂದ ಶಿಬಿರದಲ್ಲಿ ಕಲಿತ ಪ್ರಾತ್ಯಕ್ಷಿಕೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ನಾಟಕ ಪ್ರದರ್ಶನ ಇರುತ್ತದೆ.

ಅಂದು ಮಕ್ಕಳಿಗೆ ನೆನಪಿನ ಪತ್ರ ವಿತರಣೆ ಮಾಡಲಾಗುವುದು. ವಿವರಕ್ಕೆ ಸಂಪರ್ಕಿಸಿ : 98442-68176.


**ಕರ್ನಾಟಕ ವಿಧಾನಸಭಾ ಚುನಾವಣೆ - 2023**
**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ - 107,**
**ಪಕ್ಷೇತರ ಅಭ್ಯರ್ಥಿ**

ಆತ್ಮೀಯ ಬಂಧುಗಳೇ, ದಿನಾಂಕ 10.5.2023ನೇ ಬುಧವಾರದಂದು ನಡೆಯಲಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸಿರುತ್ತೇನೆ. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲು ಕಂಕಣ ಬದ್ಧನಾಗಿರುತ್ತೇನೆ. ನನ್ನ ಗುರುತಾದ ಇಟ್ಟಿಗೆ ಗುರುತಿಗೆ ತಮ್ಮ ಅಮೂಲ್ಯವಾದ ನೀಡುವುದರ ಮೂಲಕ ನನ್ನನ್ನು ಪ್ರಚಂಡ ಬಹುಮತದಿಂದ ಜಯಶೀಲನನ್ನಾಗಿಸಿ ಕ್ಷೇತ್ರದ ಅಭಿವೃದ್ಧಿಗಾಗಿ ಅವಕಾಶ ಕಲ್ಪಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.



| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಮತದಾನ |
|---|---|---|---|
| 11 | ಈರಣ್ಣ | | |

ದಿನಾಂಕ : 10.5.2023ನೇ ಬುಧವಾರ
ಸಮಯ : ಬೆಳಿಗ್ಗೆ 7 ರಿಂದ ಸಂಜೆ 6ರವರೆಗೆ
ತಮ್ಮ ಸೇವಾಂಕ್ಷಿ : ಈರಣ್ಣ S/o ಮಲ್ಲೇಶಪ್ಪ

ಇಟ್ಟಿಗೆ' ಗುರುತಿಗೆ ನಿಮ್ಮ ಮತ – ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಹಿತ


## ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಎಂ. ಅಶ್ವಿನ್ # 482 ನೇ ಕ್ರಾಸ್ ಡಿ.ಸಿ.ಎಂ. ಟೌನ್‌ಶಿಪ್ ದಾವಣಗೆರೆ 577003 ಮೊ.ನಂ. 9620037714. ಹಂಚಿಕೆ ತಿಳುವಳಿಕೆ ಪತ್ರ ದಿನಾಂಕ 15.06.2013 ಮನೆ ನಂ. 2708 ಎಂ.ಐ.ಜಿ. 15x9 ತುಂಗಭದ್ರ ಬಡಾವಣೆ, ಕುಂದುವಾಡ, ದಾವಣಗೆರೆ. ಮೂಲ ದಾಖಲಾತಿ ಜೆರಾಕ್ಸ್ ಮಾಡುವ ಸಂದರ್ಭದಲ್ಲಿ ಕಳೆದು ಹೋಗಿರುತ್ತದೆ. ಯಾರಿಗಾದರೂ ಇದು ಲಭ್ಯ ಇದ್ದಲ್ಲಿ ಈ ಬಗ್ಗೆ ಯಾವುದೇ ವ್ಯಕ್ತಿ ಇಲ್ಲವೇ ವ್ಯಕ್ತಿಗಳಿಗೆ ಈ ಆಸ್ತಿ ಸಂಬಂಧ ಯಾವುದೇ ತಕರಾರುಗಳಿದ್ದರೆ ತಮ್ಮ ತಕರಾರುಗಳನ್ನು ಈ ಕೆಳಗೆ ಸಹಿ ಮಾಡಿರುವವರಿಗೆ ಸರಿಯಾದ ದಾಖಲೆಗಳ ಮೂಲಕ ಈ ಪ್ರಕಟಣೆಯ 7 ದಿನಗಳೊಳಗೆ ಕಳುಹಿಸಬಹುದಾಗಿದೆ.

ಸಹಿ /- ಶೈಲಾ ಎಂ
ವಕೀಲರು, ದಾವಣಗೆರೆ-577004.
28.04.2023

## ಕನಕ ಗುರುಪೀಠಕ್ಕೆ ಶಾ ಭೇಟಿ



ದಾವಣಗೆರೆ, ಏ. 28 - ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಸಂಜೆ ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾಮಠಕ್ಕೆ ಭೇಟಿ ನೀಡಿ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

## ಆನಾಪಾನ ಶಿಬಿರ

ದಾವಣಗೆರೆ, ಏ. 28 - ನಗರದ ಬೆಳಕು ಇಂಚರ ಶಾಲೆಯಲ್ಲಿ 10 ರಿಂದ 19 ವರ್ಷದ ವಯಸ್ಸಿನ ಮಕ್ಕಳು ಮತ್ತು ಹದಿಹರೆಯದವರಿಗೆ ಇದೇ ದಿನಾಂಕ 30ರ ಭಾನುವಾರ ಉಸಿರಾಟ, ಧ್ಯಾನ, ಒಳಬರುವ, ಹೊರಹೋಗುವ ಉಸಿರು ಗಮನಿಸುವ ಆನಾಪಾನ ಶಿಬಿರ ನಡೆಯಲಿದೆ.

ಸಂಪರ್ಕಿಸಿ : 90087 33008, 86181 03741, 98442 45111, 94485 88789, https://www.dhamma.org/en/schedules/v2/noncenter/davanagere.in#normal

## ದ್ವಿತೀಯ ಪಿಯುಸಿಯಲ್ಲಿ ಭದ್ರಾ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ



ದಾವಣಗೆರೆ, ಏ.28- ನಗರದ ಭದ್ರಾ ಪದವಿ ಪೂರ್ವ ಕಾಲೇಜಿಗೆ 2022-23ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದಿರುತ್ತದೆ.

ವಿಜ್ಞಾನ ವಿಭಾಗದಲ್ಲಿ ಕು. ವಿಶ್ವನಾಥ್ ಬಿ.ಕೆ. ಶೇ. 97%, ವಿನಾಯಕ ಎ.ಆರ್. ಶೇ. 92.6, ಪುನೀತ್ ಎಸ್.ಪಿ. ಶೇ. 91, ಆಕಾಶ್ ಎಲ್.ಜಿ. ಶೇ. 90, ಸಚಿನ್ ಜಾಧವ್ ಶೇ. 89, ಕಲ್ಲೇಶ್ ಪಿ.ಎನ್. ಶೇ.88, ರಜನಿ ಆರ್. ಶೇ. 87 ಅಂಕಗಳನ್ನು ಗಳಿಸಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಕು. ಶ್ರದ್ಧಾ ವಿ. ಶೇಟ್ ಶೇ. 94, ಜೀವಿತಾ ಕೆ.ಜಿ. ಮತ್ತು ಸುಹಾಸ್ ಎಸ್. ಶೇ. 93, ಮನೋಜ್ ಜೆಸಿ ಕೋಲೇಕರ್ ಮತ್ತು ರಕ್ಷಿತಾ ಹೆಚ್ ಶೇ. 92, ಶಾಹಿನಾ ಬಾನು, ಛಾಯಾ ಕೆ.ಎಂ. ಸುಶ್ಮಿತಾ ಸಿ. ಪಿ.ಎಂ. ಮತ್ತು ಚೌಧರಿ ಶೇ. 91 ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಕು. ವಿಶ್ವನಾಥ್ ಬಿ.ಕೆ. 600 ಅಂಕಗಳಿಗೆ 567 ಅಂಕ ಮತ್ತು ವಾಣಿಜ್ಯ ವಿಭಾಗದಲ್ಲಿ ಕು. ಶ್ರದ್ಧಾ ವಿ. ಶೇಟ್ 561 ಅಂಕಗಳನ್ನು ಪಡೆದಿದ್ದಾರೆ.

ಕನ್ನಡದಲ್ಲಿ ಕು. ವಿಶ್ವನಾಥ್ ಬಿ.ಕೆ. ಮತ್ತು ವಿಜಯನಾಯ್ಕ, ಗಣಿತದಲ್ಲಿ ಕು. ವಿಶ್ವನಾಥ್ ಬಿ.ಕೆ., ಲೆಕ್ಕ ಶಾಸ್ತ್ರದಲ್ಲಿ ಜೀವಿತಾ ಕೆ.ಜಿ. ಮತ್ತು ಸುಹಾಸ್ ಎಸ್., ಮನೋಜ್ ಜೆ.ಸಿ. ಮತ್ತು ಸಿದ್ದೇಶಿ ಜಿ.ಎನ್. 100 ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ.

## ಅಭಿವೃದ್ಧಿಗೆ ನನ್ನ ಮೇಲೆ ವಿಶ್ವಾಸ ಇಡಿ : ಎಸ್ಸೆಸ್ಸೆಂ



ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ರೋಡ್ ಶೋ

ದಾವಣಗೆರೆ, ಏ.28- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಎಂಸಿಸಿ ಬಿ ಬ್ಲಾಕ್ ನಲ್ಲಿ ಭರ್ಜರಿ ರೋಡ್ ಶೋ ನಡೆಸಿದರು.

38ನೇ ವಾರ್ಡ್‌ನ ಎಂಸಿಸಿ 'ಬಿ' ಬ್ಲಾಕ್‌ನ ಎರಡನೇ ಮುಖ್ಯ ರಸ್ತೆಯ 2ನೇ ತಿರುವಿನಿಂದ ಆರಂಭಗೊಂಡ ಮೆರವಣಿಗೆಯು ವಿವಿಧ ರಸ್ತೆಗಳಲ್ಲಿ ಸಾಗಿತು. ಮಲ್ಲಿಕಾರ್ಜುನ್ ಅವರಿಗೆ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಹಾಗೂ ಕಾಂಗ್ರೆಸ್ ಮುಖಂಡ ಶಿವಾನಂದ್ ಪಲ್ಲಾಗಟ್ಟೆ ಸಾಥ್ ನೀಡಿದರು.

ಹೋದ ಕಡೆಗಳಲ್ಲಿ ಮಲ್ಲಿಕಾರ್ಜುನ್ ಅವರಿಗೆ ವಾರ್ಡ್‌ನ ಜನರು ಪ್ರೀತಿ, ವಿಶ್ವಾಸದಿಂದ ಬರಮಾಡಿಕೊಂಡರು. ಜನರತ್ತ ಕೈ ಬೀಸುತ್ತಾ ಮತಯಾಚನೆ ಮಾಡಿದ ಮಲ್ಲಿಕಾರ್ಜುನ್ ಅವರಿಗೆ ಜನರೂ ಸಹ ಕೈ ಬೀಸುತ್ತಾ ಪ್ರೀತಿ ತೋರಿದರು.


ಇದೇ ಸಂದರ್ಭದಲ್ಲಿ ಎಸ್.ಎಸ್ ಮಲ್ಲಿಕಾರ್ಜುನ್ ಮಾತನಾಡಿ, ದಾವಣಗೆರೆಯಲ್ಲಿ ಉದ್ಯೋಗ ಕೊರತೆ ಇದೆ, ದೊಡ್ಡ ದೊಡ್ಡ ಕೈಗಾರಿಕೆಗಳು ಬರಬೇಕಿದೆ. ಇದಕ್ಕಾಗಿ ಈ ಬಾರಿ ಕಾಂಗ್ರೆಸ್‌ಗೆ ಮತ ನೀಡಿ. ನಾನು ಗೆದ್ದು ಬಂದ ಬಳಿಕ ನಾನು ನೀಡಿದ ಭರವಸೆ ಈಡೇರಿಸುತ್ತೇನೆ. ಕಳೆದ ಐದು ವರ್ಷಗಳಿಂದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ, ಮತ್ತೆ ಅಭಿವೃದ್ಧಿಗಾಗಿ ನನಗೆ ಮತ ಕೊಡಿ. ನನ್ನ ಮೇಲಿಟ್ಟ ವಿಶ್ವಾಸ ಉಳಿಸಿಕೊಳ್ಳುತ್ತೇನೆ ಎಂದು ಹೇಳಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ದಾವಣಗೆರೆ ಜಿಲ್ಲೆಯೂ ಇದಕ್ಕೆ ಹೊರತಲ್ಲ. ಏನೇ ಆಗಬೇಕಾದರೂ ದುಡ್ಡು ಕೊಡಲೇಬೇಕು. ಅಷ್ಟು ಭ್ರಷ್ಟ ಸರ್ಕಾರ ಬಿಜೆಪಿ. ಭ್ರಷ್ಟಾಚಾರದಲ್ಲಿ ನಿರತವಾಗಿರುವ ಬಿಜೆಪಿಯನ್ನು ಕಿತ್ತೊಗೆಯಬೇಕು. ಮತ್ತೊಮ್ಮೆ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಎಲ್ಲರೂ ಪಕ್ಷಕ್ಕೆ ಬೆಂಬಲ ನೀಡಿ. ನನಗೆ ನೀವು ತೋರುತ್ತಿರುವ ಪ್ರೀತಿ, ವಿಶ್ವಾಸ ಮತ್ತಷ್ಟು ಹುಮ್ಮಸ್ಸು ತಂದಿದೆ ಎಂದರು.

> **ಕಳೆದ ಐದು ವರ್ಷಗಳಲ್ಲಿ ಅಭಿವೃದ್ಧಿ ನಿಂತ ನೀರಾಗಿದೆ. ಮತ್ತೆ ಗೆದ್ದು ಬಂದರೆ ಎಲ್ಲರೂ ದಾವಣಗೆರೆಯತ್ತ ತಿರುಗಿ ನೋಡುವಂತೆ ಕೆಲಸ ಮಾಡಿ ತೋರಿಸುತ್ತೇನೆ. ನಾವು ಮಾಡಿದ ಅನೇಕ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡಿಲ್ಲ. ಪೂರ್ಣಗೊಳಿಸಲು ಮತ್ತೊಮ್ಮೆ ನನಗೆ ಅವಕಾಶ ನೀಡಿ.**
>
> **- ಎಸ್.ಎಸ್. ಮಲ್ಲಿಕಾರ್ಜುನ್, ಕಾಂಗ್ರೆಸ್ ಅಭ್ಯರ್ಥಿ, ದಾವಣಗೆರೆ ಉತ್ತರ ವಲಯ**

ರೋಡ್ ಶೋನಲ್ಲಿ ಬಾಬಣ್ಣ, ಮೂರ್ತಣ್ಣ, ಡಿ.ಡಿ. ಬಸಣ್ಣ, ರಾಜಣ್ಣ, ಆಲೂರು ಜ್ಯೋತಿರ್ಲಿಂಗ, ಮುರುಗೇಶ್ ಮಂತ್ರಿ, ಮನು, ಮನೇಶ್, ಇಂದೂದರ್, ಮೇಕಾ ಸತ್ಯನಾರಾಯಣ್, ನೀಲಕಂಠಪ್ಪ, ಬಸವರಾಜ್, ಮಂಜು, ಮಂಜುನಾಥ್, ನಿಖಿಲ್, ಭರತ್, ಪ್ರಮೋದ್, ಪ್ರಜ್ವಲ್, ಉಮೇಶ್, ಪರಶುರಾಮ್ ಭಟ್, ಪ್ರಕಾಶ್ ಗೌಡ್ರು, ಗುರುಮೂರ್ತಿ, ನಿರ್ಮಲಾ ಸುಭಾಷ್, ಯಶೋಧ ಪ್ರಕಾಶ್, ಸರೋಜಾ ರೆಡ್ಡಿ, ಶೋಭಾ ಪಲ್ಲಾಗಟ್ಟೆ, ಮಂಜುಳಾ ಬಸಲಿಂಗಪ್ಪ, ಪುಷ್ಪಾ ಸುರೇಶ್, ಪಾರ್ವತಕ್ಕ ಸೇರಿದಂತೆ ವಾರ್ಡ್ ನ ಹಿರಿಯರು, ನಾಗರಿಕರು ಪಾಲ್ಗೊಂಡಿದ್ದರು.

## ಕಾಂಗ್ರೆಸ್ ಇನ್ನೂ ಅಧಿಕಾರದ ಮದದಲ್ಲಿದೆ



ಬೆಂಗಳೂರು, ಏ. 28 - ಕಾಂಗ್ರೆಸ್ ತಮ್ಮ ನೂರು ವರ್ಷಗಳ ಸಂಸ್ಕೃತಿಯನ್ನು ಗಾಳಿಗೆ ತೂರಿದ್ದಾರೆ. ಇನ್ನೂ ಅಧಿಕಾರದ ಮದದಲ್ಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರನ್ನು ಗುಲಾಮರೆಂದು ತಿಳಿದುಕೊಂಡಿರುವ ಕಾಂಗ್ರೆಸ್, ಏನು ಬೇಕಾದರೂ ಮಾತಾಡಿದರೆ ನಡೆಯುತ್ತದೆ ಎಂಬ ಅಮಲಿನಲ್ಲಿ ಇದೆ. ಜನ ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಾತಾಡಿರುವುದು ಎಲ್ಲಕ್ಕಿಂತ ಹೆಚ್ಚು ನೋವಾಗಿದೆ. ಸಿದ್ದರಾಮಯ್ಯ ಹಾಗೂ ಖರ್ಗೆ ಅವರು 50 ವರ್ಷ ಸಾರ್ವಜನಿಕ ಜೀವನ ಕಳೆದಿದ್ದಾರೆ. ಕೊನೆಯ ಹಂತದಲ್ಲಿ ಗೌರವಯುತವಾಗಿ ನಡೆದುಕೊಂಡರೆ ಶೋಭೆ ತರುತ್ತದೆ ಎಂದರು. ಇಲ್ಲದಿದ್ದರೆ ಜನ ಇಷ್ಟು ವರ್ಷ ಇವರು ಏನು ಮಾಡಿದರು ಎಂದು ಕೇಳುತ್ತಾರೆ ಎಂದರು.

ಮೋದಿ ಅವರನ್ನು ಯಾವಾಗ, ಯಾವಾಗ ಬೈದರೋ ಅವಾಗ ಮೋದಿ ಮತ ಜಾಸ್ತಿ ಆಗಿವೆ. ಮುಖ್ಯಮಂತ್ರಿ ಆದಾಗ ಬೈದರು, ಮೋದಿ ಮೂರು ಬಾರಿ ಮುಖ್ಯಮಂತ್ರಿ ಆದರು, ಪ್ರಧಾನಮಂತ್ರಿಯಾದರು. ಇದೀಗ ವಿಷ ಸರ್ಪ ಎಂಬ ಹೇಳಿಕೆ ಮೂಲಕ ಜನರ ಭಾವನೆ ಕೆರಳಿಸುತ್ತಿದ್ದಾರೆ. ಜನರೇ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ. ಸಿದ್ದರಾಮಯ್ಯ ಅವರು ನನ್ನನ್ನು ಗುರಿಯಾಗಿಸುವುದು ಸಹಜ ಎಂದರು.

ಕಾಂಗ್ರೆಸ್ ಮತ ಬ್ಯಾಂಕ್ ಛಿದ್ರವಾಗಿದೆ. ಅವರ ಮತ ಬ್ಯಾಂಕ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು. ಅವರ ಕಾಲ ಕೆಳಗೆ ಇದ್ದ ಮತಗಳು ಸರಿದು ಹೋಗಿವೆ. ಹಾಗಾಗಿ ನನ್ನನ್ನು ಟಾರ್ಗೆಟ್ ಮಾಡಿದ್ದಾರೆ ಎಂದರು.

ಎಸ್ಸಿ, ಎಸ್ಟಿ, ಒಬಿಸಿ ಮತಗಳು ಅವರ ಕೈ ತಪ್ಪಿ ಅವರ ಅಣೆಕಟ್ಟು ಒಡೆದಿದೆ ಎಂದ ಬೊಮ್ಮಾಯಿ, ಸಿದ್ದರಾಮಯ್ಯ ಇದೀಗ ಡಿ.ಕೆ. ಶಿವಕುಮಾರ್‌ಗೆ ಪೈಪೋಟಿ ಕೊಡುತ್ತಿದ್ದಾರೆ. ಆ ಮಟ್ಟಕ್ಕೆ ಸಿದ್ದರಾಮಯ್ಯ ಇಳಿದಿದ್ದಾರೆ ಎಂದರು.

ಸಿದ್ದರಾಮಯ್ಯ ಅವರ ಮೇಲೆ 8 ಸಾವಿರ ಕೋಟಿ ರೂ.ಗಳ ಭ್ರಷ್ಟಾಚಾರದ ಆರೋಪ ಇದೆ. ಅದಕ್ಕೆ ಉತ್ತರ ಕೊಡಬೇಕಾಗುತ್ತೆ ಎಂದು ಹೀಗೆ ಮಾತನಾಡುತ್ತಿದ್ದಾರೆ ಎಂದರು.

## ಜೆಡಿಎಸ್ ಅಧಿಕಾರಕ್ಕೆ ಬರುವ ವಿಶ್ವಾಸ : ಶಿವಶಂಕರ್



ದಾವಣಗೆರೆ, ಏ. 28 - ಕಾಂಗ್ರೆಸ್ ಅಧಿಕಾರದಿಂದ ಬೇಸತ್ತಿದ್ದ ರಾಜ್ಯದ ಜನತೆ ಬಿಜೆಪಿ ಪಕ್ಷವನ್ನು ಆಯ್ಕೆ ಮಾಡಿದರು. ಆದರೆ, ಬಿಜೆಪಿಯ ಆಡಳಿತ ವೈಖರಿ ಕಂಡು ರೋಸಿಹೋಗಿರುವ ಜನರು ಹೊಸ ಬದಲಾವಣೆಗಾಗಿ ಕಾಯುತ್ತಿದ್ದಾರೆ. ಆದ್ದರಿಂದ ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಮಾಜಿ ಶಾಸಕ, ಹರಿಹರ ಜೆಡಿಎಸ್ ಅಭ್ಯರ್ಥಿ ಎಚ್. ಎಸ್. ಶಿವಶಂಕರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ ಮೊನ್ನೆ ಏರ್ಪಾಡಾಗಿದ್ದ ಉತ್ತರ ವಿಧಾನಸಭಾ ಕ್ಷೇತ್ರದ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಈ ಬಾರಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ವಿಶೇಷ ಚೇತನರಿಗೆ ಮತ್ತು ವಿಧವೆಯರಿಗೆ 2500 ಮಾಸಿಕ ಪಿಂಚಣಿ, ಶಾಲಾ ಮಕ್ಕಳಿಗೆ ಸೈಕಲ್ ವಿತರಣೆ, ರೈತರಿಗೆ 24 ಗಂಟೆ ವಿದ್ಯುತ್, ಒಂದು ಕುಟುಂಬಕ್ಕೆ ಒಂದು ವರ್ಷಕ್ಕೆ 5 ಗ್ಯಾಸ್ ಸಿಲಿಂಡರ್ ಉಚಿತ, ಮಹಿಳಾ ಸಂಘಗಳ ಸಾಲ ಮನ್ನಾ, ವೃದ್ಧರಿಗೆ ಐದು ಸಾವಿರ ಮಾಸಿಕ ಪಿಂಚಣಿ ಹೀಗೆ ಅನೇಕ ಜನಪರ ಮತ್ತು ರೈತ ಪರ ಘೋಷಣೆಗಳನ್ನು ಹೊರಡಿಸಿದ್ದು, ಪಕ್ಷದ ಕಾರ್ಯಕರ್ತರು ಇದನ್ನು ಜನರಿಗೆ ತಿಳಿಸಬೇಕೆಂದು ಅವರು ಕರೆ ನೀಡಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ ಮಾತನಾಡಿ, 14 ತಿಂಗಳ ಆಡಳಿತದಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅವರು 25,000 ಕೋಟಿ ಸಾಲ ಮನ್ನಾ ಮಾಡಿರುವುದನ್ನು ರಾಜ್ಯದ ರೈತರು ಇಂದಿಗೂ ನೆನೆಯುವಂತೆ ಮಾಡಿದೆ. ರೈತರು, ಕುಮಾರಸ್ವಾಮಿ ಅವರ ಋಣವನ್ನು ಮತ ಹಾಕುವುದರ ಮೂಲಕ ತೀರಿಸಲಿಕ್ಕೆ ಕಾಯುತ್ತಿದ್ದಾರೆ ಎಂದು ಹೇಳಿದರು. ಉತ್ತರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬಾತಿ ಶಂಕರ್ ಮಾತನಾಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿಗಳಾದ ಗಣೇಶ ದಾಸಕರಿಯಪ್ಪ, ಕಡತಿ ಅಂಜನಪ್ಪ, ಸೈಯದ್ ಫಕೃದ್ದೀನ್ ದೊಡ್ಮನೆ, ಹುಲುಮನೆ ಕಿರಣ್, ಶೀಲಾ ಕುಮಾರಿ, ರೇಖಾ ಸಿಂಗ್, ಗಾಯತ್ರಿ ಹಾಲೇಶ್, ಸುಧಾ ಗೌಡ, ಹೊನ್ನಮ್ಮ, ಮೊಹಮ್ಮದ್, ವೀರೇಶ್ ದೇವರಟ್ಟೆ, ಪ್ರಕಾಶ್, ಶ್ರೀಕಾಂತ್, ಮಧು ನಾಗರಕಟ್ಟೆ, ವಿಶ್ವನಾಥ, ಯುವ ಘಟಕದ ಶ್ರೀನಿವಾಸ್, ಬಾತಿ ಶ್ರೀನಿವಾಸ್, ತಾಂಡಾ ಚೇತನ್, ಕುರ್ಕಿ ವಿರೂಪಾಕ್ಷಪ್ಪ, ವಕೀಲ ಯೋಗೀಶ್ ಮತ್ತಿತರರಿದ್ದರು.

## ಬೆಂಕಿಯಿಲ್ಲದೆ ಅಡುಗೆ ತಯಾರಿಸುವ ಕಲೆ



### ರಾಣೇಬೆನ್ನೂರು

ರಾಣೆಬೆನ್ನೂರು, ಏ. 28 - ತಾಲ್ಲೂಕಿನ ಅಸುಂಡಿ ಗ್ರಾಮದ ಡಾ. ಕಡಕೋಳ ಪೋದಾರ್ ಲರ್ನ್ ಸ್ಕೂಲ್‌ನಲ್ಲಿ ಬೇಸಿಗೆ ಶಿಬಿರದ ಪ್ರಯುಕ್ತ ಮಕ್ಕಳಿಗಾಗಿ ಬೆಂಕಿಯಿಲ್ಲದೆ ಅಡುಗೆ ತಯಾರಿಸುವ ಕಲೆಯ ಬಗ್ಗೆ ತಿಳಿಸಲಾಯಿತು.

ಈ ಸಮಯದಲ್ಲಿ ಶಿಕ್ಷಕಿ ರೂಪಾ ಘಾಟ್ಗೆ ಮಾತನಾಡಿ, ಜಿಡ್ಡು ಪದಾರ್ಥಗಳ ಸೇವನೆಯು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹಸಿ ತರಕಾರಿಗಳನ್ನು ಮತ್ತು ಹಣ್ಣುಗಳನ್ನು ಹೆಚ್ಚಾಗಿ ಸೇವಿಸುವುದರಿಂದ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದು ಎಂದರು.

ರುಚಿಕರವಾದ ಸ್ಯಾಂಡ್‌ವಿಚ್ ಮತ್ತು ಸವಿಯಾದ ಫ್ರೂಟ್ ಸಲಾಡ್ ಮಾಡುವ ಬಗೆಯನ್ನು ಮಕ್ಕಳಿಗೆ ಪ್ರಾತ್ಯಕ್ಷಿಕೆ ಮೂಲಕ ಕಲಿಸಿ ಕೊಡಲಾಯಿತು.

ಮಕ್ಕಳು ತಾವೇ ಮಾಡಿದ ಸ್ಯಾಂಡವಿಚ್ ಮತ್ತು ಫ್ರೂಟ್ ಸಲಾಡ್ ಸೇವಿಸಿ ಸಂತಸಗೊಂಡರು. ಪ್ರಾ. ರೂಪೇಶ ಘಾಟ್ಗೆ, ಸುಮ ಬಿ. ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನಗರದ ಜೈನ್ ಆಸ್ಪತ್ರೆಯಲ್ಲಿ ಆರೋಗ್ಯ ಶಿಬಿರ

ಶ್ರೀ ಭಗವಾನ್ ಮಹಾವೀರ ಜೈನ್ ಆಸ್ಪತ್ರೆಯಲ್ಲಿ ಇಂದಿನಿಂದ ಇದೇ ದಿನಾಂಕ 30ರವರೆಗೆ ಪ್ರತಿದಿನ ಬೆಳಿಗ್ಗೆ 9 ರಿಂದ 12ವರೆಗೆ ಆರೋಗ್ಯ ಶಿಬಿರ ನಡೆಯಲಿದೆ. ಶಿಬಿರದಲ್ಲಿ ವಿವಿಧ ಕಾಯಿಲೆಗಳ ಕುರಿತಂತೆ ಸೂಕ್ತ ಮಾಹಿತಿ ಮತ್ತು ಚಿಕಿತ್ಸೆ ನೀಡಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ : 9606048423.

## ಭಾಷಾನಗರದಲ್ಲಿ ಇಂದು ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್ಸೆಸ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರು ಮಹಾನಗರ ಪಾಲಿಕೆಯ 4ನೇ ವಾರ್ಡಿನಲ್ಲಿ ಇಂದು ಪ್ರಚಾರ ನಡೆಸಲಿದ್ದಾರೆ. ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ 4ನೇ ವಾರ್ಡ್‌ನ ಶಿವನಗರ, ಬಾಷಾನಗರ, ಮೆಹಬೂಬ್ ನಗರದಲ್ಲಿ ಪ್ರಚಾರ ನಡೆಸುವರು. ಮಹಾನಗರ ಪಾಲಿಕೆ ಸದಸ್ಯ ಕಬೀರ್ ಖಾನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಮತ್ತಿತರರು ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ.

## ಪಕ್ಷೇತರ ಅಭ್ಯರ್ಥಿಯಾಗಿ ಗುಮ್ಮನೂರು ಮಲ್ಲಿಕಾರ್ಜುನ್

ದಾವಣಗೆರೆ, ಏ. 28- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ ಎಂದು ವಕೀಲ ಕೆ.ಎಂ. ಮಲ್ಲಿಕಾರ್ಜುನಪ್ಪ ಗುಮ್ಮನೂರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. 15 ವರ್ಷಗಳ ಕಾಲ ಬಿಜೆಪಿ ಸಕ್ರಿಯ ಕಾರ್ಯಕರ್ತನಾಗಿ ದುಡಿದಿದ್ದೇನೆ. ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿ ಅರ್ಜಿ ಸಲ್ಲಿಸಿದ್ದೆ. ಪಕ್ಷ ಟಿಕೆಟ್ ನೀಡದ ಕಾರಣ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದೇನೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ತಿಪ್ಪೇಶ್ ಮತ್ತು ಗಿರೀಶ್ ಉಪಸ್ಥಿತರಿದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಕೆ. ಕೃಷ್ಣಮೂರ್ತಿ ಇವರ ಜ್ಞಾಪಕಾರ್ಥವಾಗಿ ಕೆ.ಪ್ರದೀಪ್ ಮತ್ತು ಕುಟುಂಬ ವರ್ಗದವರ ಸೇವಾರ್ಥ, ದಾವಣಗೆರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್ವಿನ್ಸ್ ಕೆಫೆಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 28. ವಿದ್ಯಾರ್ಹತೆ - SSLC, PUC ಪಾಸ್ ಅಥವಾ ಫೇಲ್.
ಸಂಪರ್ಕಿಸಿ : ನಿರ್ವಿನ್ಸ್ ಕೆಫೆ, ಆಂಜನೇಯ ಬಡಾವಣೆ, ನೇತ್ರಾವತಿ ಹಾಸ್ಟೆಲ್ ರೋಡ್, ದಾವಣಗೆರೆ.
93804 69079, 8496971882

**ತಕ್ಷಣ ಬೇಕಾಗಿದ್ದಾರೆ**
ಡಿಟಿಡಿಸಿ ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗಿಯರು (Ladies) ಬೇಕಾಗಿದ್ದಾರೆ. ಸಂಜೆ 5 ರಿಂದ ರಾತ್ರಿ 10.30ರವರೆಗೆ Part time ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಮೊ.97385-23711

**ಪಾನಿಪುರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ**
ಬೆಳಿಗ್ಗೆ 7 ರಿಂದ ಮಧ್ಯಾಹ್ನ 2ರವರೆಗೆ
ಮೊ. 99166-67888

**ಮನೆ ಬಾಡಿಗೆಗಿದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 9ನೇ ಕ್ರಾಸ್‌ನಲ್ಲಿ ಡೋರ್ ನಂ. 144 ನಂಬರಿನ ಮನೆಯ ಒಂದನೇ ಮಹಡಿಯಲ್ಲಿ ನೀರಿನ ಸೌಕರ್ಯ ಇರುವ 3 ಬೆಡ್ ರೂಂ ಮನೆ ಬಾಡಿಗೆಗಿದೆ. ಸಂಪರ್ಕಿಸಿ
94480-47506

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಮನೆ ಬಾಡಿಗೆ/ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೆಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ಮನೆ ಬಾಡಿಗೆ ಅಥವಾ ಭೋಗ್ಯಕ್ಕಿದೆ.
98440 65710

**ಮನೆ ಬಾಡಿಗೆಗೆ**
ಸರಸ್ವತಿ ಬಡಾವಣೆ 'ಬಿ' ಬ್ಲಾಕ್, 1ನೇ ಮೇನ್, 4ನೇ ಕ್ರಾಸ್, ಕೆ.ಎಸ್.ಎಸ್. ಕಾಲೇಜ್ ಎದುರು ರಸ್ತೆ, ಶ್ರೀಕರ #829/15, ಉತ್ತರ ದಿಕ್ಕು, 2 ಬೆಡ್ ರೂಂ, ಬೋರ್ / ಮುನ್ಸಿಪಲ್ ನೀರು, ಕಾರ್ ಪಾರ್ಕಿಂಗ್, 1ನೇ ಮಹಡಿಯಲ್ಲಿ ಮನೆ ಬಾಡಿಗೆಗೆ ಇದೆ.
96203 99426

**ಸೈಟು ಮಾರಾಟಕ್ಕಿದೆ**
ಮಲ್ಲ ಶೆಟ್ಟಿಹಳ್ಳಿ NH-4 ಗೆ ಹೊಂದಿಕೊಂಡಿರುವ (30x40) ಪೂರ್ವ-ಉತ್ತರ ( ರೂ 1200)
70196 18397

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ, ಸಂಪರ್ಕಿಸಬೇಕಾದ ವಿಳಾಸ:
ಸಾಕೇತ್ ಎಂಟರ್ ಪ್ರೈಸಸ್,
ಪ್ಲಾಟ್ ನಂ. 5-E ಕರೂರ್ ಇಂಡಸ್ಟ್ರಿಯಲ್ ಏರಿಯಾ ಡಿ.ಐ.ಸಿ.ಆಫೀಸ್ ಎದುರು, ದಾವಣಗೆರೆ-577006
Mob : 94826 71264

**ವೀರಶೈವ ಖಾನಾವಳಿ**
ಕ್ಲೀನಿಂಗ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಬೇಕಾಗಿದ್ದಾರೆ
ಸಂಬಳ : 10,000, ಸಂಪರ್ಕಿಸಿ
99017 70830
99458 29046

**ತಳ್ಳುವ ಗಾಡಿ ಬಾಡಿಗೆ ಇದೆ**
ಹೋಟೆಲ್ ಮಾಡುವ ತಳ್ಳುವ ಗಾಡಿ ಬಾಡಿಗೆಗೆ ಇದೆ.
ಸಸ್ಯ ಹಾರಿಗಳಿಗೆ ಮಾತ್ರ ಸಂಪರ್ಕಿಸಿ:
90080 92650

**ಮನೆ ಬಾಡಿಗೆಗಿದೆ**
ಎಸ್.ಎಸ್. ಲೇಔಟ್, ಬಿ ಬ್ಲಾಕ್, 2 ಬಿಹೆಚ್‌ಕೆ ಮತ್ತು 3 ಬಿಹೆಚ್‌ಕೆ, 4ನೇ ಮೇನ್, 7ನೇ ಕ್ರಾಸ್,
90084 82412
(ಬ್ರೋಕರ್‌ಗೆ ಅವಕಾಶವಿಲ್ಲ)

**ಬೇಕಾಗಿದ್ದಾರೆ**
SSLC & PUC, ಆದ ಹುಡುಗರಿಗೆ ಆದ್ಯತೆ. ದಿನಾಂಕ : 28,29,30ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಜಯ ಸ್ಟುಡಿಯೋ, 2ನೇ, ಮೇನ್, 1ನೇ ಕ್ರಾಸ್, ಪಿಜೆ ಬಡಾವಣೆ, ದಾವಣಗೆರೆ.

**EC / ಇಸಿ, E-swathu, Khatha Change Building Licence & Other Property Documents**
96118-66449

**WANTED**
Required male or female worker for sales in hardware Shop. Age 18 to 35
Qulification : 2nd PUC
POOJA HARDWARES
Address : Opp. Aruna Theatre, P.B. Road, Davangere.

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**SALES GIRL REQUIRED**
Sales Staff needed for innerwear cloth shop
women's Paradise
AVK College Road, P.J. Extention, Davangere.
96204 53208

**Learn For Future Career**
**ADVANCED EXCEL**
The Institute of Accounts & Tax Management (IATM), 2nd main, 6th cross, Ram & Co Circle, P.J. Exten, Davangere.
Call for more Information On Course
97438 06120, 98867 63469

**ಹಣಗೆರೆ ಕಟ್ಟೆ ಜ್ಯೋತಿಷ್ಯ ಫಲಂ**
ಶ್ರೀ ಚೌಡೇಶ್ವರಿ ದೇವಿ ಮತ್ತು ಭೂತರಾಯನ ಪ್ರಯೋಗದಿಂದ ಪೂಜೆ ಸಲ್ಲಿಸಲಾಗುತ್ತದೆ.
ಪಂ|| ಎ.ಕೆ ರಾವ್
ವಿ.ಸೂ. ಸ್ತ್ರೀ-ಪುರುಷ ವಶೀಕರಣ. ಕೇವಲ 3 ದಿನಗಳಲ್ಲಿ ಪರಿಹಾರ ಶತ ಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ.
99644 84508

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಶೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರುಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 1200 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು, ಸೆಲ್ಲರ್ 2400 ಅಡಿಗಳು ಸಂಪರ್ಕಿಸಿ.
96205 95579

**ಮನೆ ಬಾಡಿಗೆಗೆ ಇದೆ**
(Fuly Furnished ) North East face ಇರುವ ಡುಪ್ಲೆಕ್ಸ್ 4 BHK ವಿಶಾಲವಾದ ಮನೆ (ಸೋಲಾರ್, ಕಾರ್ ಪಾರ್ಕಿಂಗ್) ಇರುವ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಇದೆ. (Veg Only)
Agent : 95385 65909

**Eshwaramma Higher Primary & High School**
P. J. Extention, Davanagere -2
TEACHER'S REQUIRED
* Science Teacher - 01
M.Sc, B.Ed. (PM - Method)
* English teacher - 01
MA, B.Ed.
*Atractive Salary.
*PF-Facility. *ESI -Facility.
Contact : 77604 99155

**ಬೇಕಾಗಿದ್ದಾರೆ**
ಹಾರ್ಡ್‌ವೇರ್ ಶಾಪ್‌ನಲ್ಲಿ ಸೇಲ್ಸ್ ಮಾಡಲು ದ್ವಿತೀಯ ಪಿಯುಸಿ ಓದಿರುವ ಮಹಿಳೆಯರು ಅಥವಾ ಪುರುಷರು (ವಯಸ್ಸು : 18 ರಿಂದ 35) ಕೆಲಸಕ್ಕೆ ಬೇಕಾಗಿದ್ದಾರೆ.
ಪೂಜಾ ಹಾರ್ಡ್‌ವೇರ್ಸ್
ಅರುಣ ಟಾಕೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ 11,000 ಊಟ, ರೂಂ ಉಚಿತ
ಸಂಪರ್ಕಿಸಿ :
97400 98064
97400 98047

**1 BHK House for Rent**
2nd floor, #3369/20, 4th cross, Kuvempu Nagar, MCC B Block, Shamanur road, DVG. Contact :
89707 03629

**Share Market**
FREE COURSE, Basic Knoweldge, Best Education & Free Demat A/c.
8971425955

**ಪ್ರವಾಸ**
ಮೂರು ದಿನಗಳ ಕಲರ್‌ಫುಲ್ ಹೈದ್ರಾಬಾದ್ ಪ್ರವಾಸ ಮೇ 17ರಂದು. ಪ್ರವಾಸ ಸ್ಥಳಗಳು : ಸಾಲಾರ್ ಜಂಗ್ ಮ್ಯೂಸಿಯಂ, ಎನ್‌ಟಿಆರ್ ಗಾರ್ಡನ್, ಲುಂಬಿನಿ ಪಾರ್ಕ್, ಚಾರ್ಮಿನಾರ್, ಬಿರ್ಲಾ ಮಂದಿರ, ಸ್ನೋ ವರ್ಲ್ಡ್, ರಾಮೋಜಿ ಫಿಲಂ ಸಿಟಿ
94481 62499, 99455 34966
ಎಸ್.ಎ. ರಾಜು, ಗೀತಾ ಟ್ರಾವಲ್ಸ್, ಮಹಿಳಾ ಸಮಾಜ ಕಾಂಪ್ಲೆಕ್ಸ್, ದಾವಣಗೆರೆ.

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ**
ವರ್ಕ್ ಫ್ರಮ್ ಹೋಮ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ)
ಆಫೀಸ್ ವರ್ಕ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ)
ವೇತನ : 15000, 20,000.
94833 02285

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.3.5.2023ರ ಬುಧವಾರ
ದಿ.4.5.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ರಕ್ತ ದಾನ ಶ್ರೇಷ್ಠ ದಾನ**

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**NAME CLARIFICATION**
I Shankar lal v @ shankarlal s/o velji Resident at D.No. 72, 110/45, 1st floor, B.T. layout behind LIC office, K.R. Road cross, Davanagere, In my passport my name as mentioned as SHANKAR_LAL V and in my Aadhar card my name mentioned as SHANKARLAL. The above both names are my names only, In future all my documents and transactions will be in my name SHANKAR LAL V instead of SHANKARLAL.- SHANKARLAL. V

**WANTED**
Senior/Junior Accountant
Interior Designer having knowledge of auto Cad
(Attractive Salary with PF and ESI)
Contact : AMBIKA FURNITURE
843, Ashoka Road, Davangere -02.
94816 71954

**NAME CLARIFICATION**
I Prashanth subhash siranji resident at D.No. 1864/37, 10th cross, Vinayaka Badavane, Davanagere. In my Aadhar and pan card my name mentioned as prashanth S. Siranji but in my passport my name mentioned as prashanth kumar siranji. Above mentioned names refer to me only. In future all my documents and trasactions will be in the name of prashanth subhash siranji.
- Prashanth subhash siranji

**HOUSE FOR LEASE**
Independent house
3 BHK, 5th Main, 5th Cross, St. Pauls Convent Road, P.J.Extension Davangere.
88616 89590

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ವಿದ್ಯಾರ್ಥಿಗಳಿಗೆ ಉಚಿತ ಯೂನಿಫಾರ್ಮ್ ನೀಡಲಾಗುವುದು
ಶ್ರೀ ಗಂಗೋತ್ರಿ ಕಮ್ಯೂನಿಟಿ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
86602 35013



**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ, ಸ್ವಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ:2 & 3ರಂದು
ಬಸವರಾಜ ಲಾಡ್ಜ ಪಿ.ಬಿ. ರಸ್ತೆ.
ಡಾ|| ಎಚ್.ಐ.ಆರ್. ದೊಡ್ಡಮನಿ
ದುಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್‌ಸ್ಟಾಂಡ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ದಾವಣಗೆರೆ ಮತ್ತು ಸಂತೇಬೆನ್ನೂರು ಭಾಗದಲ್ಲಿ ವಿಂಗ್ಸ್ ಡೆವಲಪರ್ಸ್ ಕಂಪನಿಗಾಗಿ ಫೀಲ್ಡ್‌ವರ್ಕ್ ಮಾಡಲು 2 ವ್ಹೀಲರ್ ಬೈಕ್ ಹೊಂದಿರುವ ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ :
ವಿಂಗ್ಸ್ ಡೆವಲಪರ್ಸ್ & ಕನ್ಸಲ್ಟೆನ್ಸಿ, ಡಿಸಿಎಂ ಟೌನ್‌ಶಿಪ್, ದಾವಣಗೆರೆ.

**REQUIRED SALES EXECUTIVE**
Experience: 2 – 3 years
Contact & whatsap :
9448046571,7899337571
Email: sv.salesvenu15@mail.com

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಖರೀದಿ, ಅಡಮಾನ, ಸೈಟ್ ಖರೀದಿ ಮತ್ತು ಫೈನಾನ್ಸ್ ಕಂಪನಿಗಳ ಸಾಲ ನಮ್ಮ ಬ್ಯಾಂಕಿಗೆ ಸಾಲ ವರ್ಗಾವಣೆಗೆ ಇಂದೇ ಕರೆ ಮಾಡಿ (ಬಡ್ಡಿ ದರ ವಾರ್ಷಿಕ 8.5%)
ಫೋ. : 99455 22287

**ಬೇಸಿಗೆಯ ಬಿಸಿ-ಬಿಸಿ ಆಫರ್**
RO + UV ವಾಟರ್ ಫಿಲ್ಟರ್, 5499/- ರೂ. ಮಾತ್ರ. Fully automatic ಗ್ಯಾಸ್ ಗೀಸರ್ 3499/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ:
ಮರುತ್ ಎಂಟರ್‌ಪ್ರೈಸಸ್
YMC ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ನೇರ ಪರೀಕ್ಷೆಗಳು**
SSLC, PUC, BA, B.Com, BBA, MBA (ALL) B.Tech, Diploma, ITI, NTC,
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : 86602 35013
ಪಾಂಪ್ಲೆಂಟ್ ಹಂಚಲು ಯುವಕರು ಬೇಕಾಗಿದ್ದಾರೆ.

**ಹೆಸರು ಸ್ಪಷ್ಟೀಕರಣ**
ನಾನು, ಶ್ರೀಮತಿ ರಾಜೇಶ್ವರಿ ಜಿ.ಎನ್. ಕೋಂ ನಿಜಗುಣಾರಾಧ್ಯ ಜಿ.ಟಿ. ಗೌಡ್ರು ಬೀದಿ, ಕಾರಿಗನೂರು, ಚನ್ನಗಿರಿ (ತಾ) ದಾವಣಗೆರೆ ಜಿಲ್ಲೆ ವಾಸಿಯಾದ ನನ್ನ ಹೆಸರು ಆಧಾರ್ ಕಾರ್ಡ್‌ನಲ್ಲಿ ರಾಜೇಶ್ವರಿ ಜಿ.ಎನ್. ಕೋಂ ನಿಜಗುಣಾರಾಧ್ಯ ಜಿ.ಟಿ. ಎಂದು ಹಾಗೂ ಚುನಾವಣಾ ಗುರುತಿನ ಚೀಟಿಯಲ್ಲಿ ಜಿ.ಎನ್. ಲಲಿತ ಕೋಂ ಜಿ.ಟಿ. ನಿಜಗುಣಾರಾಧ್ಯ ಎಂದು ಮತ್ತು ದಾವಣಗೆರೆ ಅರ್ಬನ್ ಬ್ಯಾಂಕ್ ಖಾತೆಯಲ್ಲಿ ಜಿ.ಎನ್. ಲಲಿತ ಎಂದು ನಮೂದಾಗಿದ್ದು, ಈ ಮೇಲ್ಕಂಡ ಮೂರೂ ಹೆಸರುಗಳು ನನಗೇ ಸೇರಿದ್ದು, ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳು, ದಾಖಲೆಗಳು ರಾಜೇಶ್ವರಿ ಜಿ.ಎನ್. ಕೋಂ ನಿಜಗುಣಾರಾಧ್ಯ, ಜಿ.ಟಿ. ಹೆಸರಿನಲ್ಲಿರುತ್ತವೆ ಎಂದು ದಿನಾಂಕ 28.04.2023 ರಂದು ದಾವಣಗೆರೆ ನೋಟರಿಯವರ ಮುಂದೆ ಪ್ರಮಾಣೀಕರಿಸದ್ದೇನೆ. - ರಾಜೇಶ್ವರಿ ಜಿ.ಎನ್.

# ಉತ್ತರದ ಬಿಜೆಪಿ ಅಭ್ಯರ್ಥಿ ಲೋಕಿಕೆರೆ ನಾಗರಾಜ್‌ರಿಂದ ಎಪಿಎಂಸಿಯಲ್ಲಿ ಮತ ಯಾಚನೆ



ದಾವಣಗೆರೆ, ಏ. 28- ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಹಣ್ಣು ಮತ್ತು ತರಕಾರಿ ವ್ಯಾಪಾರಸ್ಥರು, ಖರೀದಿದಾರರ ಬಳಿ ಇಂದು ಮತಯಾಚಿಸಿದರು.

ನಗರದ ತಾಲ್ಲೂಕು ಕಚೇರಿ (ರೈತರ ಭವನ) ಬಳಿಯ ಎಪಿಎಂಸಿ ಮಾರುಕಟ್ಟೆಯಲ್ಲಿ ಸಂಚಾರ ನಡೆಸಿ, ಅಲ್ಲಿನ ತರಕಾರಿ, ಹಣ್ಣು ಮತ್ತು ಹೂ ವ್ಯಾಪಾರಿಗಳು, ಖರೀದಿದಾರರ ಬಳಿ ತೆರಳಿ ಮತಯಾಚಿಸಿದರು.

ಈ ವೇಳೆ ವ್ಯಾಪಾರಿಗಳು ಸಹ ನಾಗರಾಜ್ ಲೋಕಿಕೆರೆ ಅವರಿಗೆ ಪ್ರತಿಸ್ಪಂದಿಸಿ, ರೈತರ ಪರ ಕಾಳಜಿ, ಸಮಾಜಮುಖಿ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಜನತೆಯ ಸಂಪೂರ್ಣ ಒಲವು ನನ್ನ ಹಾಗೂ ಬಿಜೆಪಿ ಮೇಲೆ ಇದೆ. ನಮ್ಮ ಮೇಲೆ ಜನತೆ ಮತ್ತು ನನ್ನ ನೆಚ್ಚಿನ ಕಾರ್ಯಕರ್ತರು ತೋರುತ್ತಿರುವ ಈ ವಿಶ್ವಾಸದಿಂದ ಇನ್ನೂ ಹೆಚ್ಚು ಹೆಚ್ಚು ಚುನಾವಣಾ ಕೆಲಸಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ಸಹಾಯಕವಾಗಿದೆ. ಇದು ನನ್ನ ಗೆಲುವಿನ ಮೊದಲ ಹೆಜ್ಜೆ ಎಂದು ನಂಬಿದ್ದೇನೆ ಎಂದು ನಾಗರಾಜ್ ಲೋಕಿಕೆರೆ ತಿಳಿಸಿದರು.

ನಾಗರಾಜ್ ಲೋಕಿಕೆರೆ ಅವರಿಗೆ ಅವರ ಪುತ್ರ ಅಭಿ, ಸೋದರ ಸಂಬಂಧಿ ಸಹೋದರ ಡಾ. ಮಧು ಲೋಕಿಕೆರೆ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಚ್ಚಿನ್, ಉಪಾಧ್ಯಕ್ಷರುಗಳಾದ ಕಿರಣ್, ಶಶಿ ಸೇರಿದಂತೆ ಯುವ ಮೋರ್ಚಾ ಕಾರ್ಯಕರ್ತರ ತಂಡ ಸಾಥ್ ನೀಡಿತ್ತು.

# ಅಜಯ್‌ಕುಮಾರ್‌ಗೆ ಬಲ ತುಂಬಿದ ಸಿದ್ದೇಶ್ವರ




ದಾವಣಗೆರೆ, ಏ. 28- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ಅವರಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಮತದಾರರ ಗಮನ ಸೆಳೆಯುವ ಮೂಲಕ ಬಲ ತುಂಬಿದರು.

21 ನೇ ವಾರ್ಡ್ ನಲ್ಲಿನ ಇಂದಿನ ಮತ ಪ್ರಚಾರಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಅಜಯ್ ಕುಮಾರ್ ಅವರೊಂದಿಗೆ ತೆರೆದ ವಾಹನದಲ್ಲಿ ಮತ ಪ್ರಚಾರ ಮಾಡಿದರು. ಬಸಾಪುರ ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನದಿಂದ ಆರಂಭಿಸಿ ಗ್ರಾಮದಲ್ಲಿ ಮತ ಯಾಚಿಸಿದರು.

**ಪುಷ್ಪಾರ್ಚನೆ:** ಮತ ಯಾಚನೆ ಸಂದರ್ಭದಲ್ಲಿ ಬಸಾಪುರದ ಮಹಿಳೆಯೊಬ್ಬರು ಅಜಯ್ ಕುಮಾರ್ ಅವರಿಗೆ ದೃಷ್ಟಿ ತೆಗೆದು ಶುಭ ಹಾರೈಸಿದರು. ಅಜಯ್ ಕುಮಾರ್ ಅವರನ್ನು ಪುಷ್ಪಾರ್ಚನೆ ಮಾಡುವ ಮೂಲಕ ಗ್ರಾಮಸ್ಥರು ಸ್ವಾಗತಿಸಿದರು.

ಸಂಜೆ 19 ನೇ ವಾರ್ಡ್ ಶೇಖರಪ್ಪ ನಗರದ ಗಣೇಶ್ ಹೋಟೆಲ್ ನಿಂದ ಮತ ಯಾಚನೆ ಮಾಡಲಾಯಿತು.

ಬಿಜೆಪಿ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ, ರಾಜನಹಳ್ಳಿ ಶಿವಕುಮಾರ್, ಹೆಚ್.ಎಂ. ರುದ್ರಮುನಿಸ್ವಾಮಿ, ನಗರ ಪಾಲಿಕೆ ನಾಮ ನಿರ್ದೇಶಿತ ಸದಸ್ಯ ಮರುಳಸಿದ್ಧಪ್ಪ, ದಕ್ಷಿಣ ಮಂಡಲ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ, ಮಂಜಾನಾಯ್ಕ ಸೇರಿದಂತೆ ಇತರರು ಮತ ಯಾಚಿಸಿದರು.

## ನೀಲಾನಹಳ್ಳಿ ದಿಗಂಬರ ಜೈನ ಟ್ರಸ್ಟ್ ನವೀಕರಣ

ದಾವಣಗೆರೆ, ಏ. 28- ತಾಲ್ಲೂಕಿನ ನೀಲಾನಹಳ್ಳಿ ದಿಗಂಬರ ಜೈನ ಟ್ರಸ್ಟ್ ನವೀಕರಣಗೊಂಡಿದ್ದು, ಟ್ರಸ್ಟ್ ಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ಗೌರವಾಧ್ಯಕ್ಷರಾಗಿ ಬಾಹುಬಲಿ, ಅಧ್ಯಕ್ಷರಾಗಿ ಪದ್ಮರಾಜ ಹೊಳಲು, ಉಪಾಧ್ಯಕ್ಷರಾಗಿ ವೈ.ಆರ್. ಲೋಕೇಶ್, ಜೆ.ಎಸ್. ಚಂದ್ರನಾಥ, ಸಲಹೆಗಾರರಾಗಿ ವೀರೇಂದ್ರ ಬೊಮ್ಮಣ್ಣ ಹೊಳಲು, ಕಾರ್ಯದರ್ಶಿಯಾಗಿ ಜೆ.ಎನ್. ಮಹೇಂದ್ರ, ಸಹ ಕಾರ್ಯದರ್ಶಿಯಾಗಿ ಎನ್.ಡಿ. ರಾಜಪ್ಪ, ಖಜಾಂಚಿಯಾಗಿ ಆರ್. ನಾಗರಾಜ್ ಅವರನ್ನು ನೇಮಕ ಮಾಡಲಾಗಿದೆ. ಸದಸ್ಯರಾಗಿ ಸಿ.ಎಲ್. ಆನಂದ, ಜೆ.ಸಿ. ಮೋಹನ್, ಎನ್.ಎ. ನಾಗರಾಜ್, ಜೆ.ವಿ. ಪ್ರವೀಣ, ಜೆ. ತವನಪ್ಪ, ದೇವೇಂದ್ರ ಸಮಾಜ, ಜೆ. ಪದ್ಮರಾಜ, ವಿ.ರಂಜಿತ ನೇಮಕಗೊಂಡಿದ್ದಾರೆ.

## ಪಿಯುಸಿ : ವಿದ್ಯಾಪೋಷಕ ಸಂಸ್ಥೆ ನೆರವಿನ ಸಾಧನೆ

ದಾವಣಗೆರೆ,ಏ.28- ವಿದ್ಯಾ ಪೋಷಕ ಸಂಸ್ಥೆಯಿಂದ ಧನಸಹಾಯ, ಪುಸ್ತಕ ಮತ್ತು ತರಬೇತಿ ಶಿಬಿರಗಳಲ್ಲಿ ಮಾರ್ಗದರ್ಶನ ಪಡೆದಿರುವ ದಾವಣಗೆರೆ ಮತ್ತು ಹಾವೇರಿ ಜಿಲ್ಲೆಯ ಪಿಯುಸಿ ವಿದ್ಯಾರ್ಥಿಗಳಾದ ಸುಭಾಷ್ ಎಸ್. ಕಟ್ಟಿಮನಿ (ಶೇ.96.33), ಕಲ್ಪನಾ ಎಸ್.ಎಂ. (ಶೇ.89) ಮಮತಾ ಗುಂಡೂರು (ಶೇ.89.66), ಸೈಯಿದಾ ನಾಹಿದ್ (ಶೇ.88.66) ಲಾವಣ್ಯ ಸಿ.ಕೆ. (ಶೇ.88.66) ಜ್ಯೋತಿ ಎಸ್. (ಶೇ.88.16) ಕಾವ್ಯ ಪಿ. (ಶೇ.86.50) ಮತ್ತು ಅಮೃತ ಆರ್. (ಶೇ.85.66) ಉತ್ತಮ ಸಾಧನೆ ಮಾಡಿದ್ದಾರೆ.

ಅನೇಕ ಸಂಘ, ಸಂಸ್ಥೆಗಳು ಹಾಗೂ ಸ್ಥಳೀಯ ದಾನಿಗಳು ನೀಡಿದ ಸಹಾಯವನ್ನು ಸದುಪಯೋಗ ಪಡಿಸಿಕೊಂಡು ಕಷ್ಟಕರ ಪರಿಸ್ಥಿತಿಗಳಲ್ಲೂ ಗಣನೀಯ ಸಾಧನೆಗೈದ ಈ ವಿದ್ಯಾರ್ಥಿ/ನಿಯರಿಗೆ ಸಂಸ್ಥೆಯ ಆಡಳಿತ ಮಂಡಳಿ, ಉದಾರ ದಾನಿಗಳು, ಸಂಸ್ಥೆಯ ಸ್ವಯಂಸೇವಕರ ಮತ್ತು ಹಿತೈಷಿಗಳ ಪರವಾಗಿ ಸಂಯೋಜಕ ಜಿ.ಕೆ.ದಿನೇಶ್ ಅಭಿನಂದನೆ ಸಲ್ಲಿಸಿದ್ದಾರೆ.

# ನಾಳೆ 'ನಮ್ಮ ನಡೆ ಮತಗಟ್ಟೆಯ ಕಡೆ'

**ಮತಗಟ್ಟೆಯಿಂದ ಜಿಲ್ಲಾ ಮಟ್ಟದವರೆಗೂ ವಿವಿಧ ಕಾರ್ಯಕ್ರಮಗಳು : ಸ್ವೀಪ್ ಅಧ್ಯಕ್ಷ ಸುರೇಶ್ ಹಿಟ್ನಾಳ್**

ದಾವಣಗೆರೆ, ಏ. 28- ವಿಧಾನಸಭಾ ಚುನಾವಣಾ ಮತದಾನವು ಬರುವ ಮೇ 10 ರಂದು ನಡೆಯಲಿದ್ದು, ಮತದಾರರ ಜಾಗೃತಿ ಅಂಗವಾಗಿ ನಾಡಿದ್ದು ದಿನಾಂಕ 30 ರ ಭಾನುವಾರ ಜಿಲ್ಲೆಯ ಎಲ್ಲಾ ಮತಗಟ್ಟೆ, ಗ್ರಾಮ ಪಂಚಾಯಿತಿ, ತಾಲ್ಲೂಕು ಮಟ್ಟ ಸೇರಿದಂತೆ ಜಿಲ್ಲಾ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಹಿಟ್ನಾಳ್ ತಿಳಿಸಿದ್ದಾರೆ.

ಮತಗಟ್ಟೆ ಮಟ್ಟದಲ್ಲಿ ಮತಗಟ್ಟೆ ಅಧಿಕಾರಿಯ ನೇತೃತ್ವದಲ್ಲಿ, ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನೇತೃತ್ವದಲ್ಲಿ ಮತ್ತು ಆಯಾ ತಾಲ್ಲೂಕು ಮಟ್ಟದಲ್ಲಿ ಆಯಾ ಮಟ್ಟದ ಅಧಿಕಾರಿಗಳು ಸೇರಿದಂತೆ ಜಿಲ್ಲಾ ಮಟ್ಟದಲ್ಲಿ ನಾಡಿದ್ದು ದಿನಾಂಕ 30 ರ ಬೆಳಗ್ಗೆ 8 ರಿಂದ ವಿವಿಧ ಕಾರ್ಯಕ್ರಮಗಳು ಆರಂಭವಾಗಲಿವೆ. ಪ್ರಜಾಪ್ರಭುತ್ವ ಹಬ್ಬ ಮೇ 10 ಮತದಾನ ಎಂಬ ಧ್ಯೇಯ ವಾಕ್ಯ ಒಳಗೊಂಡು ಧ್ವಜಾರೋಹಣ ನೆರವೇರಿಸಲಾಗುತ್ತದೆ. ರಾಷ್ಟ್ರೀಯ ಹಬ್ಬದ ಮಾದರಿಯಲ್ಲಿ ಈ ಕಾರ್ಯಕ್ರಮ ಮಾಡಲಾಗುತ್ತಿದೆ.

ದಾವಣಗೆರೆಯಲ್ಲಿ ನಾಡಿದ್ದು ದಿನಾಂಕ 30 ರ ಭಾನುವಾರ ಬೆಳಿಗ್ಗೆ 8 ರಿಂದ ಕಲಾತಂಡ ಗಳೊಂದಿಗೆ ಕಾಲ್ನಡಿಗೆ ಜಾಗೃತಿ ಜಾಥಾ ಗುಂಡಿ ಮಹಾದೇವಪ್ಪ ವೃತ್ತದಿಂದ ಜಿಲ್ಲಾ ಕ್ರೀಡಾಂಗಣ ಮತ್ತು ಬೆಳಿಗ್ಗೆ 8.30 ರಿಂದ 9 ಜಿಲ್ಲಾ ಕ್ರೀಡಾಂಗಣದಲ್ಲಿ ಮತದಾನ ಎಂಬ ಧ್ವಜಾರೋಹಣ, ಬೆಳಿಗ್ಗೆ 9 ರಿಂದ 9.30 ಜಿಲ್ಲಾ ಕ್ರೀಡಾಂಗಣದಿಂದ ವಿದ್ಯಾರ್ಥಿಭವನ, ಕೆಇಬಿ ವೃತ್ತ, ಅಂಬೇಡ್ಕರ್ ವೃತ್ತ, ಅರುಣ ಚಿತ್ರಮಂದಿರ, ಜಿಲ್ಲಾಧಿಕಾರಿಗಳ ಕಚೇರಿವರೆಗೆ ದ್ವಿಚಕ್ರ ವಾಹನಗಳ ರ‍್ಯಾಲಿ, ಬೆಳಿಗ್ಗೆ 10 ರಿಂದ 10.30 ಸೈಕಲ್ ರ‍್ಯಾಲಿ ದೃಶ್ಯ ಕಲಾ ಕಾಲೇಜು, ಆಂಜನೇಯ ದೇವಸ್ಥಾನದ ಮುಂಭಾಗದ ರಸ್ತೆ, ಬಿಐಇಟಿ ರಸ್ತೆ, ನೂತನ ಕಾಲೇಜು, ಕುವೆಂಪು ಕನ್ನಡ ಭವನ.

ಸಂಜೆ 4 ರಿಂದ 4.30 ಜಿಲ್ಲಾ ಕ್ರೀಡಾಂಗಣದಲ್ಲಿ ಗಾಳಿಪಟ, ಸಂಜೆ 4.30 ರಿಂದ 4.45 ಗಂಟೆಯವರೆಗೆ ಮಹಾನಗರ ಪಾಲಿಕೆ ಆವರಣದಲ್ಲಿ ಜಿಪ್‌ಲೈನ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕಿರುನಾಟಕ, ಸಂಜೆ 5 ರಿಂದ 5.15 ಜಯಚಾಮರಾಜೇಂದ್ರ ವೃತ್ತ ಮಹಿಳಾ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಸ್ವೀಪ್ ಬ್ರಾಂಡಿಂಗ್ ಬ್ಯಾಗ್ ವಿತರಣೆ, ಸಂಜೆ 5.30 ರಿಂದ 6 ಗಂಟೆಯವರೆಗೆ ಹೈಸ್ಕೂಲ್ ಮೈದಾನದಲ್ಲಿ ಚಿತ್ರಕಲಾ ಮತದಾರರ ಜಾಗೃತಿ ಕಾರ್ಯಕ್ರಮ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

# ಬಿಜೆಪಿ ಅಭ್ಯರ್ಥಿ ಅಜಯ್ ಕುಮಾರ್ ಪರ ಕಿಚ್ಚನ ರೋಡ್ ಶೋ



ದಾವಣಗೆರೆ, ಏ.27- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ಅವರ ಪರ ಅಭಿನವ ಚಕ್ರವರ್ತಿ ಕಿಚ್ಚ ಸುದೀಪ್ ಅವರು ನಿನ್ನೆ ರೋಡ್ ಶೋ ಮೂಲಕ ಮತ ಪ್ರಚಾರ ನಡೆಸಿದರು.

ಹದಡಿ ಗ್ರಾಮದಲ್ಲಿ ಅಜಯ್ ಕುಮಾರ್ ಅವರೊಂದಿಗೆ ಬಿರುಸಿನ ಮತ ಪ್ರಚಾರ ನಡೆಸಿದ ಸುದೀಪ್, ಅಜಯ್ ಕುಮಾರ್ ಅವರನ್ನು ಬೆಂಬಲಿಸುವಂತೆ ಮತದಾರರ ಮನ ಸೆಳೆದರು. ಹದಡಿ ಮುಖ್ಯ ರಸ್ತೆಯಿಂದ ಪ್ರಾರಂಭವಾದ ರೋಡ್ ಶೋ ಕುರ್ಕಿ ಕ್ರಾಸ್‌ನಲ್ಲಿ ಸಮಾರೋಪಗೊಂಡಿತು. ಈ ವೇಳೆ ನೆರೆದಿದ್ದ ಅಭಿಮಾನಿಗಳನ್ನು ಉದ್ದೇಶಿಸಿ ಮಾತನಾಡಿದ ಕಿಚ್ಚ ಸುದೀಪ್, ತಾವು ಅಭಿನಯಿಸಿರುವ ಮದಕರಿ ಚಿತ್ರದ ಡೈಲಾಗ್ ಒಂದನ್ನು ಹೇಳಿ ರಂಜಿಸಿದರಲ್ಲದೇ, ಅಜಯ್ ಕುಮಾರ್ ಅವರು ನನ್ನ ಆತ್ಮೀಯ ಸ್ನೇಹಿತರಾಗಿದ್ದು, ಅವರನ್ನು ಬೆಂಬಲಿಸಿ ಹರಸುವಂತೆ ಮತದಾರರಲ್ಲಿ ಮನವಿ ಮಾಡಿದರು. ಈ ರೋಡ್ ಶೋನಲ್ಲಿ ರಾಜನಹಳ್ಳಿ ಶಿವಕುಮಾರ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಕೋಳೇನಹಳ್ಳಿ ಸತೀಶ್ ಸೇರಿದಂತೆ ಇತರರು ಸಾಥ್ ನೀಡಿದ್ದರು.

## ನೀತಿ ಸಂಹಿತೆ ಉಲ್ಲಂಘನೆ; ಮದ್ಯ ವಶ

ದಾವಣಗೆರೆ,ಏ.28- ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ನೀತಿ ಸಂಹಿತೆ ಜಾರಿಯಲ್ಲಿದ್ದು, ಜಿಲ್ಲೆಯಾದ್ಯಂತ ಕಟ್ಟುನಿಟ್ಟಿನ ಚೆಕ್‌ಪೋಸ್ಟ್ ವ್ಯವಸ್ಥೆ ಮಾಡಲಾಗಿದೆ. ಏಪ್ರಿಲ್ 27 ರಂದು ರೂ.39,464 ಮೌಲ್ಯದ 135.635 ಲೀ ಮದ್ಯ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ. ಜಿಲ್ಲೆಯಾದ್ಯಂತ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಕೈಗೊಳ್ಳಲಾಗುತ್ತಿದ್ದು, ಇದುವರೆಗೆ ರೂ.94,74,057 ನಗದು, ರೂ.2,42,72,193.99 ಮೌಲ್ಯದ 23170.97 ಲೀ ಮದ್ಯ, 3.853 ಕೆ.ಜಿ ಮಾದಕ ವಸ್ತು ಅಂದಾಜು ಮೌಲ್ಯ ರೂ.71,610., ರೂ.84,98,048 ಮೌಲ್ಯದ ಕುಕ್ಕರ್ ಸೇರಿದಂತೆ ಇತರೆ ವಸ್ತುಗಳು ಒಟ್ಟು ರೂ.4.23 ಕೋಟಿಯಷ್ಟು ನಗದು ಮತ್ತು ಇತರೆ ವಸ್ತುಗಳನ್ನು ನೀತಿ ಸಂಹಿತೆ ಆರಂಭವಾದಾಗಿನಿಂದ ಇಲ್ಲಿಯವರೆಗೆ ವಶಪಡಿಸಿಕೊಳ್ಳಲಾಗಿದೆ.

ಏ.27 ರಂದು ಪೊಲೀಸ್ ಇಲಾಖೆಯಿಂದ 48.55 ಲೀ ಮತ್ತು ಅಬಕಾರಿ ಇಲಾಖೆಯಿಂದ 87.085 ಲೀ ಮದ್ಯವನ್ನು ಕಾರ್ಯಾಚರಣೆ ಮಾಡಿ ವಶಪಡಿಸಿಕೊಳ್ಳಲಾಗಿದೆ.

# ಕಾವೇರಿ ಆನ್‌ಲೈನ್ 2ಗೆ ಚಾಲನೆ



**ಹರಿಹರ**

ಹರಿಹರ, ಏ.28- ನಗರದ ಉಪನೋಂದಣಿ ಕಚೇರಿಯಲ್ಲಿ ಸಾರ್ವಜನಿಕರಿಗೆ ತಕ್ಷಣವೇ ನೋಂದಣಿ ಕಾರ್ಯಗಳು ನಡೆಯುವುದಕ್ಕೆ ಅನುಕೂಲ ಕಲ್ಪಿಸಲು ಆನ್‌ಲೈನ್ ಕಾವೇರಿ 2 ಕಾರ್ಯಕ್ಕೆ ಚಾಲನೆ ನೀಡಲಾಯಿತು. ಆನ್‌ಲೈನ್ ಕಾವೇರಿ 2 ಕಾರ್ಯಕ್ಕೆ ನೋಂದಣಿ ಅಧಿಕಾರಿ ರಾಮಕೃಷ್ಣಪ್ಪ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಸಾರ್ವಜನಿಕರಿಗೆ ಇಲ್ಲಿಯವರೆಗೆ 2003 ರ ಕಾಯ್ದೆ ಅಡಿಯಲ್ಲಿ ನೋಂದಣಿ ಕಾರ್ಯಗಳನ್ನು ಮಾಡಿಕೊಂಡು ಬರಲಾಗುತ್ತಿತ್ತು. ಇದರಿಂದಾಗಿ ಸಾರ್ವಜನಿಕರಿಗೆ ನೋಂದಣಿ ಮಾಡಿಸುವ ಸಮಯದಲ್ಲಿ ಸರ್ವರ್ ಬ್ಯುಸಿ ಸೇರಿದಂತೆ ಹಲವಾರು ರೀತಿಯ ಸಮಸ್ಯೆಗಳು ಬರುತ್ತಿದ್ದವು ಎಂದರು. ಇದನ್ನು ಮನಗಂಡ ಸರ್ಕಾರ ಕಾವೇರಿ 2 ಆನ್‌ಲೈನ್ ವ್ಯವಸ್ಥೆ ಜಾರಿಗೆ ತಂದಿದೆ. ಇನ್ನು ಮುಂದೆ ಸಾರ್ವಜನಿಕರು ತಮ್ಮ ಕಂಪ್ಯೂಟರ್‌ನಲ್ಲಿ ಎಲ್ಲ ದಾಖಲೆಗಳನ್ನು ಸಿದ್ಧ ಮಾಡಿಕೊಂಡು ನಮ್ಮ ಬಳಿ ಬರಬೇಕು. ದಾಖಲೆ ಪರಿಶೀಲಿಸಿ, ನೋಂದಣಿ ಸಮಯ ತಿಳಿಸಲಾಗುವುದು ಎಂದರು.

ಸಾರ್ವಜನಿಕರು ಆ ಸಮಯದಲ್ಲಿ ಹಾಜರಿದ್ದು ನೋಂದಣಿ ಮಾಡಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತದೆ. ಇದರಿಂದಾಗಿ ಸಾರ್ವಜನಿಕರಿಗೆ ಸಮಯ ಉಳಿತಾಯವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ನೋಂದಣಿ ಅಧಿಕಾರಿ ಇಸ್ಮಾಯಿಲ್ ಸಾಬ್, ಮಂಜಪ್ಪ, ಮಲ್ಲಿಕಾರ್ಜುನ, ಮಂಜುನಾಥ್, ಚಂದ್ರಶೇಖರ್ ಜೆ.ಎ., ಕೆ.ಜಿ.ಎಸ್. ಪಾಟೀಲ್, ವಾಗೀಶಪ್ಪ ಕಮಲಾಪುರ, ಪರಮೇಶ್ವರ ಮತ್ತಿತರರು ಉಪಸ್ಥಿತರಿದ್ದರು.

## ಅಂಜನಾದ್ರಿ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಟ್ರಸ್ಟ್‌ಗೆ ಪದಾಧಿಕಾರಿಗಳ ಆಯ್ಕೆ

ದಾವಣಗೆರೆ, ಏ.28- ನಗರದ ಶ್ರೀ ಅಂಜನಾದ್ರಿ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಟ್ರಸ್ಟ್‌ಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಅಧ್ಯಕ್ಷರಾಗಿ ಟಿ.ಹೆಚ್. ಮಲ್ಲಿಕಾರ್ಜುನ್, ಉಪಾಧ್ಯಕ್ಷರಾಗಿ ಎನ್. ವೀರೇಶ ಬಾಬು, ಕಾರ್ಯದರ್ಶಿಯಾಗಿ ಸಿ.ಎಂ. ಪಾಟೀಲ್, ಖಜಾಂಚಿಯಾಗಿ ಎನ್, ಗಿರೀಶ್ ಬಾಬು ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ವಿರುಪಾಕ್ಷಪ್ಪ ಜವಳಿ, ಕರಿಬಸಪ್ಪ, ತೀರ್ಥರಾಜು, ಸುರೇಶ್ ಗಡ್ಡಿ, ಶಾಂತಕುಮಾರ್ ಆಯ್ಕೆಗೊಂಡಿದ್ದಾರೆ.

# ಜನಪರ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗಿದೆ

**ಬಸಾಪುರದಲ್ಲಿ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್ಸೆಸ್ ಪ್ರಚಾರ**



ದಾವಣಗೆರೆ, ಏ. 28- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರು 21ನೇ ವಾರ್ಡ್‌ನ ಬಸಾಪುರ, ಎಲ್.ಬಿ.ಎಸ್. ನಗರ, ಬಂಬೂ ಬಜಾರ್ ಎಡಭಾಗದ ವಿನಾಯಕ ಬಡಾವಣೆ ಸೇರಿದಂತೆ ವಿವಿಧ ಕಡೆಗಳಲ್ಲಿ ಇಂದು ಮನೆ-ಮನೆಗೆ ತೆರಳಿ ಪ್ರಚಾರ ನಡೆಸಿದರು.

ಈ ಸಂದರ್ಭದಲ್ಲಿ ಮಾತಾಡಿದ ಅವರು, ನಗರ ಮತ್ತು ಗ್ರಾಮಗಳ ಅಭಿವೃದ್ಧಿ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ಅವರು ಹೇಳಿದರು.

ಈ ಭಾಗದಲ್ಲಿ ಮೂಲಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಶೌಚಾಲಯ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕುಡಿಯುವ ನೀರಿನ ಯೋಜನೆ, ರಸ್ತೆಗಳ ಅಭಿವೃದ್ಧಿ ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸಲಾಗಿದೆ ಎಂದರು.

ಇನ್ನು ಬಡವರಿಗೆ ಬೇಕಾಗಿರುವ ಅಕ್ಕಿ, ಬೇಳೆ, ಅಡುಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳ ಮೇಲೆ ತೆರಿಗೆ ವಿಧಿಸಿರುವುದರಿಂದ ದುಪ್ಪಟ್ಟು ಬೆಲೆ ಹೆಚ್ಚಳಗೊಂಡು ಬಡವರು, ಕೃಷಿ ಕಾರ್ಮಿಕರು ಬದುಕುವುದೇ ದುಸ್ತರವಾಗಿದೆ ಎಂದರು.

ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರನ್ನು ಬೆಂಬಲಿಸಿ ಉದ್ಯಮಿಗಳಾದ ಎಸ್.ಎಸ್. ಬಕ್ಕೇಶ್, ಎಸ್.ಎಸ್.ಗಣೇಶ್ ಅವರುಗಳ ನೇತೃತ್ವದಲ್ಲಿ ಉದ್ಯಮಿ ಅಥಣಿ ವೀರಣ್ಣ, ಎಸ್.ಕೆ.ವೀರಣ್ಣ, ನಾಯಕ ಸಮಾಜದ ಅಧ್ಯಕ್ಷರಾದ ಬಿ.ವೀರಣ್ಣ, ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು, ಸಂಘ-ಸಂಸ್ಥೆಗಳ ಮುಖ್ಯಸ್ಥರು ಗ್ರಾಮಾಂತರ ಪ್ರದೇಶಗಳ ಮನೆ-ಮನೆಗೆ ತೆರಳಿ ಮತ ಯಾಚಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಶಿವಲೀಲಾ ಕೊಟ್ರಯ್ಯ, ಎಸ್. ಸುರೇಂದ್ರಪ್ಪ, ಸಿ. ಮಹೇಶ್ವರಪ್ಪ, ಬಾಮ ಬಸವರಾಜಯ್ಯ, ಶಿವಲೀಲಾ ಕೊಟ್ರಯ್ಯ, ಕೆ.ಎಲ್. ಹರೀಶ್ ಬಸಾಪುರ, ಎಂ.ಎಸ್.ಕೊಟ್ರಯ್ಯ, ಗೌಡ್ರ ರಾಜಶೇಖರ್, ಕೆ. ಸಿ. ಲಿಂಗರಾಜ್, ಬಿಟಿ ಮರಳಸಿದ್ದಪ್ಪ, ಹಾದಿಮನಿ ಶಿವಕುಮಾರ್, ಕೆ.ಬಿ.ಲಿಂಗರಾಜ್, ಸಿ.ಬಿ. ಶ್ರೀನಿವಾಸ್, ಅರಳಿ ಉಮೇಶ್, ವಿಜಯ್ ಕುಮಾರ್, ಬಾತಿ ಜೈ ರಾಜ್, ಅರುಣ್ ಕುಮಾರ್, ಎ.ಎಚ್. ಹನುಮಂತಪ್ಪ, ಗಂಗಾಧರಾಚಾರ್, ಬಿ.ಕೆ. ನಾಗೇಂದ್ರಪ್ಪ, ಕರಿಬಸಯ್ಯ, ಕ್ಯಾಪಿನ ಚೌಡಪ್ಪ, ನಾಗರಾಜ್, ಜಿ. ತಿಪ್ಪೇಸ್ವಾಮಿ, ರುದ್ರೇಶ್, ತಿಪ್ಪೇಶ್, ಹನುಮಂತಪ್ಪ, ತಿಪ್ಪೇಶ್, ನವೀನ್, ಪರಶುರಾಮ್ ಮತ್ತು ಇತರರು ಉಪಸ್ಥಿತರಿದ್ದರು.

## ಹೊನ್ನಾಳಿ : ಮೇ 1ಕ್ಕೆ ಹಾಲುಮತ ಸಮಾಜದ ಬೃಹತ್ ಸಮಾವೇಶ

ಹೊನ್ನಾಳಿ, ಏ.28- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನ ಹಾಲುಮತ ಸಮಾಜದ ಬೃಹತ್ ಸಮಾವೇಶವನ್ನು ಮೇ 1 ರಂದು ಪಟ್ಟಣದ ಅಗಳ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹಾಲುಮತ ಸಮಾಜದ ಜಿಲ್ಲಾ ಉಪಾಧ್ಯಕ್ಷ ದಿಡಗೂರು ಪಾಲಾಕ್ಷಪ್ಪ ಹೇಳಿದರು.

ಶನಿವಾರ ಪಟ್ಟಣದಲ್ಲಿ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಹಾಲುಮತ ಸಮಾವೇಶದಲ್ಲಿ 10 ಸಾವಿರಕ್ಕೂ ಹೆಚ್ಚು ಸಮಾಜ ಬಾಂಧವರು ಪಾಲ್ಗೊಳ್ಳಲಿದ್ದಾರೆ ಎಂದರು.

ಕುರುಬ ಸಮಾಜದ ಅಧ್ಯಕ್ಷ ಎಸ್.ಎಸ್.ಬೀರಪ್ಪ ಮಾತನಾಡಿ, ಹಾಲುಮತ ಸಮಾಜದ ಸಮಾವೇಶ ಮಾಡುವ ಮೂಲಕ ನಾವೆಲ್ಲಾ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಕೈ ಬಲಪಡಿಸುವುದರ ಜೊತೆಗೆ ಅವರನ್ನು ಬಹುಮತದಿಂದ ಆಯ್ಕೆ ಮಾಡಬೇಕಿದೆ ಎಂದರು.

ಸಮಾಜದ ಮುಖಂಡ ಕುಬೇರಪ್ಪ ಮಾತನಾಡಿ, ಎಸ್ಟಿ ಮೀಸಲಾತಿಯನ್ನು ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದ್ದು ನಮ್ಮ ಬಿಜೆಪಿ ಸರ್ಕಾರ ಎಂದ ಅವರು, ಕುರುಬ ಸಮಾಜಕ್ಕೆ ಸಮುದಾಯ ಭವನ ಬೇಕೆಂದು ಬೇಡಿಕೆ ಇಟ್ಟಿದ್ದು ಚುನಾವಣೆ ನಂತರ ಸಮಾಜಕ್ಕೆ ಸಮುದಾಯ ಭವನ ನಿರ್ಮಾಣ ಮಾಡಿಕೊಡಬೇಕೆಂದರು.

ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷ ಸೀಮೆಎಣ್ಣೆ ಪಾಲಾಕ್ಷಪ್ಪ, ಪುರಸಭೆ ಮಾಜಿ ಅಧ್ಯಕ್ಷ ರಂಗನಾಥ್, ಪುರಸಭೆ ಸದಸ್ಯರಾದ ಧರ್ಮಪ್ಪ, ಮುಖಂಡರಾದ ಕೆ.ವಿ.ಚನ್ನಪ್ಪ, ಚನ್ನಪ್ಪ, ಕನಕದಾಸ್, ಹನುಮಂತಪ್ಪ, ಸಿದ್ದಪ್ಪ ಮತ್ತಿತರರಿದ್ದರು.

## ಕೆನರಾ : ಯೂನಿಯನ್‌ನ ರಾಜ್ಯ ಸಮಿತಿ ಸದಸ್ಯರಾಗಿ ಆರ್. ಆಂಜನೇಯ



ದಾವಣಗೆರೆ, ಏ. 28- ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ರಾಜ್ಯ ಸಮಿತಿ ಸದಸ್ಯರಾಗಿ ನಗರದ ಕೆನರಾ ಬ್ಯಾಂಕಿನ ವಿದ್ಯಾನಗರ ಶಾಖೆಯ ಆರ್.ಆಂಜನೇಯ ಅವರು ನೇಮಕವಾಗಿದ್ದಾರೆ ಎಂದು ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ ತಿಳಿಸಿದ್ದಾರೆ.

ಆಂಜನೇಯ, ದಾವಣಗೆರೆ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಉಪಾಧ್ಯಕ್ಷ ಹಾಗು ಅಸಂಘಟಿತ ಕಾರ್ಮಿಕ ವಲಯದ ಮುಖಂಡರಾಗಿದ್ದಾರೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

## 44ನೇ ವಾರ್ಡ್‌ನಲ್ಲಿ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಪ್ರಚಾರ



ದಾವಣಗೆರೆ, ಏ.28- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು 44ನೇ ವಾರ್ಡ್‌ನಲ್ಲಿ ಇಂದು ಪ್ರಚಾರ ನಡೆಸಿದರು. ಶ್ರೀ ಶಾರದಾಂಬ ದೇವಸ್ಥಾನದಿಂದ ಪ್ರಾರಂಭಗೊಂಡ ಮತ ಪ್ರಚಾರದಲ್ಲಿ ತೆರೆದ ವಾಹನದಲ್ಲಿ ನಾಗರಾಜ್ ಅವರು ಮತಯಾಚಿಸಿದರು.

ನಾಗರಾಜ್ ಲೋಕಿಕೆರೆ ಅವರಿಗೆ, ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಮುಖಂಡರುಗಳಾದ ಬಾಬು, ಉಮೇಶ್ ಪಾಟೀಲ್, ಹೆಚ್.ಎನ್. ಶಿವಕುಮಾರ್, ನಗರ ಪಾಲಿಕೆ ಸದಸ್ಯರಾದ ಶಿಲ್ಪಾ ಅವರ ಪತಿ ಜಯಪ್ರಕಾಶ್, ಮಾಜಿ ಮೇಯರ್ ಗುರುನಾಥ್, ಓಬಿಸಿ ಮೋರ್ಚಾದ ಗಂಗಾಧರ್, ನಗರ ಪಾಲಿಕೆ ಮಾಜಿ ಸದಸ್ಯ ಕೃಷ್ಣಮೂರ್ತಿ ಪವಾರ್ ಸೇರಿದಂತೆ ಇತರರು ಸಾಥ್ ನೀಡಿದರು.

# ಮತದಾರರ ಮಾಹಿತಿ, ನೀತಿ ಸಂಹಿತೆ ಜಾರಿಗೆ ಟೋಲ್‌ಫ್ರೀ, ಸಿವಿಜಿಲ್ ಕಾರ್ಯಾಚರಣೆ



ದಾವಣಗೆರೆ, ಏ.28- ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಮತದಾರರಿಗೆ ಸಹಾಯ ಮತ್ತು ಚುನಾವಣಾ ಅಕ್ರಮಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದು, ಮಾದರಿ ನೀತಿ ಸಂಹಿತೆ ಜಾರಿಗೆ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದ್ದು, ದಿನದ 24x7 ಮಾದರಿಯಲ್ಲಿ ಕೆಲಸ ನಿರ್ವಹಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ವಿವಿಧೆಡೆ ಚೆಕ್‌ಪೋಸ್ಟ್‌ಗಳಲ್ಲಿ ಸಿಸಿ ಕ್ಯಾಮೆರಾಗಳ ಮೂಲಕ ತೀವ್ರ ನಿಗಾ ವಹಿಸಲಾಗಿದ್ದು, ಅದರಂತೆ ಎಲ್ಲಾ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಂಟ್ರೋಲ್ ರೂಂ ಸ್ಥಾಪಿಸಿ, ಸಾರ್ವಜನಿಕರಿಗೆ ಮಾಹಿತಿಗೆ ಸಹಾಯವಾಣಿ ಹಾಗೂ ಟೋಲ್‌ಫ್ರೀ ನಂಬರ್‌ಗಳ ಮೂಲಕ ನಿಯಂತ್ರಿಸಲಾಗುತ್ತಿದೆ.

**1950 ಮತ್ತು 18004251342 ಟೋಲ್‌ಫ್ರೀ:** ಚುನಾವಣೆ ಅಕ್ರಮಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಕಂಟ್ರೋಲ್ ರೂಂ ಸ್ಥಾಪಿಸಲಾಗಿದ್ದು ಟೋಲ್‌ಫ್ರೀ ನಂಬರ್‌ಗಳ ಮೂಲಕ ಸಾರ್ವಜನಿಕರಿಂದ ಕರೆಗಳನ್ನು ಸ್ವೀಕರಿಸಲಾಗುತ್ತಿದೆ. ಮಾ.29 ರಿಂದ ಏಪ್ರಿಲ್ 25 ರ ವರೆಗೆ ಒಟ್ಟು 912 ದೂರುಗಳನ್ನು ಸ್ವೀಕರಿಸಲಾಗಿದೆ. ಇದರಲ್ಲಿ ಮತದಾರರ ಪಟ್ಟಿಯ ಮಾಹಿತಿ, ಮತದಾರರ ಹೆಸರು ಬದಲಾವಣೆ, ಚುನಾವಣಾ ಗುರುತಿನ ಚೀಟಿಗಳ ಮಾಹಿತಿಗೆ ಸಂಬಂಧಿಸಿದಂತವುಗಳಾಗಿದ್ದು ಎಲ್ಲಾ ಕರೆಗಳಿಗೆ ಮಾಹಿತಿ ನೀಡಲಾಗಿದೆ.

**ಸಿ.ವಿಜಿಲ್ ಹದ್ದಿನ ಕಣ್ಣು:** ಸಿ.ವಿಜಿಲ್ ಆಪ್ ಮೂಲಕವು ಚುನಾವಣೆ ಅಕ್ರಮಗಳ ಬಗ್ಗೆ ದೂರು ಸ್ವೀಕರಿಸಲಾಗುತ್ತಿದೆ. ಸಿ.ವಿಜಿಲ್ ಸಿಟಿಜನ್ ಆಪ್ ಡೌನ್‌ಲೋಡ್ ಮಾಡಿಕೊಂಡು ಚುನಾವಣೆ ಅಕ್ರಮ, ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ ಫೋಟೋ ಸಹಿತ ಮಾಹಿತಿ ಹಾಕಿದ 20 ನಿಮಿಷಗಳಲ್ಲಿ ಪರಿಹಾರ ದೊರಕಲಿದೆ. ಸಿ.ವಿಜಿಲ್ ಆಪ್ ಮೂಲಕ ಸಾರ್ವಜನಿಕರು ನೇರವಾಗಿ ಫೋಟೋ, ವಿಡಿಯೋ ಮತ್ತು ಆಡಿಯೋ ಸೆರೆ ಹಿಡಿದು ಕಳುಹಿಸಿದ ತಕ್ಷಣ ನಿಯಂತ್ರಣ ಕೊಠಡಿಗೆ ತಲುಪಲಿದ್ದು ಎಫ್.ಎಸ್.ಟಿ. ತಂಡವು 10 ನಿಮಿಷದೊಳಗಾಗಿ ಸ್ಥಳಕ್ಕೆ ಆಗಮಿಸಿ ಕ್ರಮ ಕೈಗೊಳ್ಳಲಿದೆ, ಇದು ಸಿ.ವಿಜಿಲ್‌ನ ವಿಶೇಷತೆಯಾಗಿದೆ.

ಜಿಲ್ಲೆಯಲ್ಲಿ ಸಿವಿಜಿಲ್ ಆಪ್ ಪರಿಶೀಲನೆಗೂ ಪ್ರತ್ಯೇಕ ತಂಡ ಕಾರ್ಯ ನಿರ್ವಹಿಸುತ್ತಿದೆ. ಇದುವರೆಗೂ 72 ದೂರುಗಳು ಸ್ವೀಕರಿಸಲಾಗಿದ್ದು ಇದರಲ್ಲಿ 53 ಪ್ರಕರಣಗಳಿಗೆ ಕ್ರಮ ಕೈಗೊಳ್ಳಲಾಗಿದೆ. ಪ್ರಾಯೋಗಿಕವಾಗಿ ಮಾಡಿದ 19 ಪ್ರಕರಣಗಳನ್ನು ಕೈಬಿಡಲಾಗಿದೆ. ಒಂದು ಪ್ರಕರಣದಲ್ಲಿ ಕಾಲ್ ಸೆಂಟರ್ ಮಾದರಿಯಲ್ಲಿ ನಡೆಸುತ್ತಿದ್ದ ಕೇಂದ್ರದ ವಿಡಿಯೋವನ್ನು ಸಿ.ವಿಜಿಲ್‌ಗೆ ಬಂದ ದೂರಿನ ಮೇರೆಗೆ ದಾಳಿ ಮಾಡಿ 59 ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ.

ಉಳಿದಂತೆ 12 ಸಾರ್ವಜನಿಕ ಸ್ಥಳಗಳಲ್ಲಿ ರಾಜಕೀಯ ಪಕ್ಷಗಳ ಚಿನ್ಹೆ, ಮುಖಂಡರ ಭಿತ್ತಿಪತ್ರಗಳಿಗೆ ಸಂಬಂಧಿಸಿದ್ದಾಗಿದೆ. ಅವುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಇನ್ನೂ ಪರಿಣಾಮಕಾರಿಯಾಗಿ ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಸಾರ್ವಜನಿಕರು ಸಿವಿಜಿಲ್ ಆಪ್ ಡೌನ್‌ಲೋಡ್ ಮಾಡಿಕೊಂಡು ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಕಂಡುಬಂದಾಗ ಇದರ ಮೂಲಕ ನೇರ ಸೆರೆ ಹಿಡಿದು ಅಪ್‌ಲೋಡ್ ಮಾಡಿದಲ್ಲಿ ಪಾರದರ್ಶಕ ಚುನಾವಣೆಗೆ ಸಹಭಾಗಿತ್ವ ಸಿಗಲಿದೆ ಎಂದು ಚುನಾವಣಾಧಿಕಾರಿ ಶಿವಾನಂದ ವಿವರಿಸಿದ್ದಾರೆ.


## ಬೇಕಾಗಿದ್ದಾರೆ

**ಶ್ರೀ ಲಿಂಗೇಶ್ವರ ವಿದ್ಯಾಸಂಸ್ಥೆ (ರಿ.), ತೋಳಹುಣಸೆ**

ಮೇಲ್ಕಾಣಿಸಿದ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಬರುವ ಶ್ರೀ ಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಕಂದಗಲ್ಲು & ತೋಳಹುಣಸೆ ದಾವಣಗೆರೆ ದ. ವಲಯ, ದಾವಣಗೆರೆ. ಅನುದಾನಕ್ಕೆ ಒಳಪಟ್ಟ ಸದರಿ ಶಾಲೆಗಳಲ್ಲಿ ಮರಣ (1), ನಿವೃತ್ತಿ (3) ಯಿಂದ ತೆರವಾದ 4 ಸಹ ಶಿಕ್ಷಕರ ಹುದ್ದೆಗೆ ಆಡಳಿತ ಮಂಡಳಿಯು ಇಲಾಖೆಯ ರೋಸ್ಟರ್ ಪದ್ಧತಿಯಂತೆ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನಿಸಿದ್ದು, ಅರ್ಜಿಯನ್ನು ಕರೆಯಲಾಗಿದೆ. ಮೂಲ ದಾಖಲಾತಿಯೊಂದಿಗೆ ಆಡಳಿತಾಧಿಕಾರಿಗಳು, ಶ್ರೀ ಲಿಂಗೇಶ್ವರ ಹಿ.ಪ್ರಾ.ಶಾಲೆ, ಕಂದಗಲ್ಲು (P), ದಾವಣಗೆರೆ (ತಾ.ಜಿ.) 577 514 ಈ ವಿಳಾಸಕ್ಕೆ ಪತ್ರಿಕಾ ಪ್ರಕಟಣೆಯಾದ 21 ದಿನಗಳೊಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಸಂದರ್ಶನ ದಿನಾಂಕವನ್ನು ಮುಂದೆ ತಿಳಿಸಲಾಗುವುದು.

| ಕ್ರ.ಸಂ. | ಹುದ್ದೆಗಳ ಸ್ಥಳ | ಹುದ್ದೆಗಳ ಸಂಖ್ಯೆ | ರೋಸ್ಟರ್ | ವಿದ್ಯಾರ್ಹತೆ |
|---|---|---|---|---|
| 1 | ತೋಳಹುಣಸೆ | 01 | ಸಾಮಾನ್ಯ | DEd/ BA B.Ed., |
| 2. | ಕಂದಗಲ್ಲು | 03 | SC (1) ಸಾಮಾನ್ಯ (2) | DEd/ BA B.Ed., B.Sc., B.Ed. |

ಆಡಳಿತಾಧಿಕಾರಿಗಳು 99017 68096

# ಪ್ರಾಮಾಣಿಕ ಮತದಾನ ಮಾಡಿ



ದಾವಣಗೆರೆ ಜಿಲ್ಲಾ ವಕೀಲರ ಸಂಘದ ಸಾಂಸ್ಕೃತಿಕ ಭವನದಲ್ಲಿ ಏರ್ಪಡಿಸಿದ್ದ ಮತದಾನ ಜಾಗೃತಿ ಚಿತ್ರಕಲಾ ಪ್ರದರ್ಶನವನ್ನು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮತ್ತಿತರರು ವೀಕ್ಷಿಸಿದರು.

ದಾವಣಗೆರೆ, ಏ. 28- ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗದೇ ಮೇ 10 ರಂದು ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ನಿರ್ಭೀತಿಯಿಂದ ನೈತಿಕ ಹಾಗೂ ಪ್ರಾಮಾಣಿಕ ಮತದಾನ ಮಾಡುವ ಮೂಲಕ ಉತ್ತಮ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕೆಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮತದಾರರಿಗೆ ಕರೆ ನೀಡಿದರು.

ನಗರದ ಜಿಲ್ಲಾ ವಕೀಲರ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾ ನ್ಯಾಯಾಂಗ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ಮತದಾರ ಜಾಗೃತ ಸಂಘ ಹಾಗೂ ಮತದಾನ ಜಾಗೃತಿ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ವಿಧಾನಸಭಾ ಚುನಾವಣೆಗೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಜಿಲ್ಲೆಯಲ್ಲಿ ಒಟ್ಟು 14,42,553 ಮತದಾರರಿದ್ದಾರೆ. 1685 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ವಿಶೇಷವಾಗಿ 80 ವರ್ಷ ಮೇಲ್ಪಟ್ಟವರಿಗೆ ಮತದಾನಕ್ಕೆ ಅವರ ಮನೆಗಳಲ್ಲೇ ಅವಕಾಶ ಕಲ್ಪಿಸಲಾಗಿದೆ ಎಂದರು. ಗ್ರಾಮೀಣ ಮಟ್ಟದಿಂದ ಹಿಡಿದು ಜಿಲ್ಲಾ ಮಟ್ಟದವರೆಗಿನ ಶಾಲಾ-ಕಾಲೇಜುಗಳಿಗೆ ಸ್ವಪ್ರೇರಣೆ ಯಿಂದ ಭೇಟಿ ನೀಡಿ, ಅಲ್ಲಿನ ಮುಖ್ಯಸ್ಥರಿಂದ 18-19 ವರ್ಷದ ವಿದ್ಯಾರ್ಥಿಗಳ ದಾಖಲೆಗಳನ್ನು ಪಡೆದು ಜಿಲ್ಲೆಯಲ್ಲಿ 38,209 ಯುವ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಮತದಾನದ ಬಗ್ಗೆ ಜಾಗೃತಿ ಮೂಡಿಸಲು ಚಿತ್ರಕಲಾ ಸ್ಪರ್ಧೆ, ಸೈಕಲ್, ಬೈಕ್ ಹಾಗೂ ಕಾಲ್ನಡಿಗೆ ಜಾಥಾ ನಡೆಸಲಾಯಿತು. ಅದರಂತೆ ನ್ಯಾಯಾಂಗ ಇಲಾಖೆ ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಕೈಜೋಡಿಸಿರುವುದು ಅತೀವ ಸಂತಸ ತಂದಿದೆ ಎಂದರು.

**ಜಿಲ್ಲಾಧಿಕಾರಿ ಶಿವಾನಂದ ಕಾಪಶಿ**

ಚುನಾವಣೆಯನ್ನು ಪ್ರಜಾ ಪ್ರಭುತ್ವದ ಹಬ್ಬ, ನಾವು ಚಲಾಯಿಸುವ ಪ್ರತಿಯೊಂದು ಮತಕ್ಕೂ ಅದರದೇ ಮೌಲ್ಯವಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮಗೆ ಬೇಕಾದ ಉತ್ತಮ ಜನಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಮಾತನಾಡಿ, ಚುನಾವಣಾ ಆಯೋಗದ ನಿರ್ದೇಶನದಂತೆ ನ್ಯಾಯಾಂಗ ಇಲಾಖೆ ಮತದಾರರ ಜಾಗೃತಿ ಸಂಘವನ್ನು ರಚಿಸಿದ್ದು, ಮತದಾರರು ತಮ್ಮ ಅಮೂಲ್ಯ ಮತವನ್ನು ಸೂಕ್ತ, ಅರ್ಹ ಅಭ್ಯರ್ಥಿಗೆ ಹಾಕುವಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ್ ಕುಮಾರ್ ಮಾತನಾಡಿ, ಭಾರತದ ಸಂವಿಧಾನ ಪ್ರಪಂಚದ ಅತಿ ದೊಡ್ಡ ಸಂವಿಧಾನ ಎಂಬ ಹೆಗ್ಗಳಿಕೆ ಪಾತ್ರವಾಗಿದ್ದು, ಕಾನೂನು ತಿಳಿವಳಿಕೆ ಇರುವ, ಸಂವಿಧಾನವನ್ನು ಅರಿತಿರುವ ಬಹುತೇಕ ವಕೀಲರು ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿದ್ದಾರೆ. ಕೆಲವರು ಮುಖ್ಯಮಂತ್ರಿಗಳಾಗಿ ಸಮರ್ಥ ಆಡಳಿತ ನಡೆಸಿದ ಉದಾಹರಣೆಗಳು ಸಹ ಇವೆ ಎಂದರು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ವಕೀಲರ ಪಾತ್ರ ಕೂಡ ಇದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆ ಮಾಡಿದ ಕೀರ್ತಿ ವಕೀಲರಿಗಿದೆ. ನೈತಿಕ ಮತದಾನದ ಮೂಲಕ ನೈತಿಕ ಹೊಣೆಗಾರಿಕೆ ಇರುವ ಆಡಳಿತವನ್ನು ಜಾರಿಗೆ ತರಬೇಕಾಗಿದೆ ಎಂದು ಹೇಳಿದರು.

> ನಾಡಿದ್ದು ದಿನಾಂಕ 30 ರಂದು 'ನಮ್ಮ ನಡೆ ಮತಗಟ್ಟೆ ಕಡೆಗೆ' ಎಂಬ ವಿನೂತನ ಕಾರ್ಯಕ್ರಮವನ್ನು ಕೂಡ ಹಮ್ಮಿಕೊಳ್ಳಲಾಗುವುದು. ಮೇ 10 ರಂದು ನಡೆಯುವ ವಿಧಾನಸಭಾ ಚುನಾವಣೆಯನ್ನು 'ಪ್ರಜಾಪ್ರಭುತ್ವದ ಹಬ್ಬ'ವನ್ನಾಗಿ ಆಚರಿಸಲಾಗುವುದು.
>
> -ಶಿವಾನಂದ ಕಾಪಶಿ, ಜಿಲ್ಲಾಧಿಕಾರಿಗಳು

> ಪ್ರತಿಯೊಬ್ಬರೂ ಸಹ ಮತಗಟ್ಟೆಗೆ ತೆರಳಿ ಮತದಾನ ಮಾಡುವಂತೆ ವಕೀಲರು ತಮ್ಮ ಕುಟುಂಬದವರಿಗೆ, ನೆರೆಹೊರೆಯವರನ್ನು ಪ್ರೇರೇಪಿಸಬೇಕು. ಯಾವುದೇ ಆಮಿಷಗಳಿಗೆ ಬಲಿಯಾಗದಂತೆ ನಿರ್ಭೀತಿಯಿಂದ ಮತ ಚಲಾಯಿಸುವಂತೆ ಮಾಡಬೇಕು.
>
> - ರಾಜೇಶ್ವರಿ ಎನ್. ಹೆಗಡೆ,, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು

ನ್ಯಾಯಾಧೀಶರುಗಳಾದ ಜೆ.ವಿ. ವಿಜಯಾನಂದ, ಟಿ.ಎಂ. ನಿವೇದಿತ, ಎನ್. ಶ್ರೀಪಾದ್, ದಶರಥ, ಅಫ್ತಾಬ್, ಸಮೀರ್ ಕೊಳ್ಳಿ, ಸಿದ್ಧರಾಜ್, ಪ್ರಶಾಂತ್, ಚಿತ್ರಕಲಾವಿದ ಚಿಕ್ಕಮಗಳೂರಿನ ನಾಮದೇವ ಕಾಗದಗಾರ ಮತ್ತಿತರರು ಉಪಸ್ಥಿತರಿದ್ದರು.

ವಕೀಲರಾದ ಅಲಮೇಲಮ್ಮ ಪ್ರಾರ್ಥಿಸಿದರು. ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಗೋಪನಾಳು ಜಿ.ಕೆ. ಬಸವರಾಜ್ ಸ್ವಾಗತಿಸಿದರು. ಕಾರ್ಯದರ್ಶಿ ಎಸ್.ಬಸವರಾಜ್ ನಿರೂಪಿಸಿದರು. ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್ ವಂದಿಸಿದರು.

# ಗೀತಾ ಶಿವರಾಜ್ ಕಾಂಗ್ರೆಸ್‌ಗೆ ಸೇರ್ಪಡೆ



ಬೆಂಗಳೂರು, ಏ. 28 – ಚಿತ್ರನಟ ಶಿವರಾಜ್ ಕುಮಾರ್ ಅವರ ಪತ್ನಿ ಗೀತಾ ಶಿವರಾಜ್ ಕುಮಾರ್ ಅವರು ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಎ.ಐ.ಸಿ.ಸಿ. ವಕ್ತಾರ ಗೌರವ್ ವಲ್ಲಭ್ ಹಾಗೂ ಕಾಂಗ್ರೆಸ್‌ನಿಂದ ಸೊರಬ ಅಭ್ಯರ್ಥಿಯಾಗಿರುವ ತಮ್ಮ ಸಹೋದರ ಮಧು ಬಂಗಾರಪ್ಪ ಅವರ ಸಮ್ಮುಖದಲ್ಲಿ ಗೀತಾ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

ಗೀತಾರ ಇನ್ನೊರ್ವ ಸಹೋದರ ಮಧು ಬಂಗಾರಪ್ಪ ಅವರು ಸೊರಬದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಗೀತಾ ಅವರು 2014ರ ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಮಾಜಿ ಸಚಿವ ಬಿ.ಬಿ. ನಿಂಗಯ್ಯ ಸಹ ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

# ಪರಮೇಶ್ವರ್ ತಲೆಗೆ ಕಲ್ಲೇಟು



ಕೊರಟಗೆರೆ, ಏ. 28 – ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಕಲ್ಲು ತೂರಾಟದಿಂದ ಮಾಜಿ ಉಪ ಮುಖ್ಯಮಂತ್ರಿ ಹಾಗೂ ಕೊರಟಗೆರೆಯ ಕಾಂಗ್ರೆಸ್ ಅಭ್ಯರ್ಥಿ ಜಿ. ಪರಮೇಶ್ವರ ತಲೆಗೆ ಪೆಟ್ಟಾಗಿದೆ.

ಬೈರನಹಳ್ಳಿಯಲ್ಲಿ ರೋಡ್ ಶೋ ನಡೆಸುವ ವೇಳೆ ಅವರ ತಲೆಗೆ ಕಲ್ಲು ಬಡಿದಿದೆ. ಬೆಂಬಲಿಗರು ಪರಮೇಶ್ವರ್ ಅವರ ಮೇಲೆ ಹೂವು ಎರಚುತ್ತಿದ್ದರು. ಆಗ ದುಷ್ಕರ್ಮಿಯೋರ್ವ ಕಲ್ಲು ಎಸೆದಿದ್ದಾನೆ.

ಗಾಯಗೊಂಡ ಪರಮೇಶ್ವರ್ ಅವರಿಗೆ ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ.

# ಜಿಲ್ಲೆಗೆ ಇಂದು ಜೆ.ಪಿ.ನಡ್ಡಾ



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ. ಪಿ. ನಡ್ಡಾ ಅವರು ಇಂದು ಮಧ್ಯಾಹ್ನ 3 ಕ್ಕೆ ಮಾಯಕೊಂಡ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಎಂ. ಬಸವರಾಜ ನಾಯ್ಕ್ ಪರ ಪ್ರಚಾರಕ್ಕಾಗಿ ಬಸವಾಪಟ್ಟಣ ಗ್ರಾಮಕ್ಕೆ ಆಗಮಿಸಲಿದ್ದಾರೆ.

# ನಗರದಲ್ಲಿ ಇಂದು ಕಲ್ಯಾಣೋತ್ಸವ



ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಸಂಜೆ 6 ಗಂಟೆಗೆ ವಿಶೇಷ ಕಲ್ಯಾಣೋತ್ಸವ ನೆರವೇರಿಸಲಾಗುವುದು, ನಂತರ ತೀರ್ಥಪ್ರಸಾದ ವಿನಿಯೋಗವಿದೆ. ನಾಳೆ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಬ್ರಹ್ಮರಥೋತ್ಸವ ನೆರವೇರಿಸಲಾಗುವುದು. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಲಿದೆ.

# ಸುಡಾನ್‌ನಲ್ಲಿ ಭಾರತೀಯರ ರಕ್ಷಣೆಗೆ ವಾಯುಪಡೆ ದಿಟ್ಟ ಕಾರ್ಯಾಚರಣೆ

**ಹಾಳಾಗಿದ್ದ ಏರ್‌ಸ್ಟ್ರಿಪ್‌ನಲ್ಲಿ ಕತ್ತಲ ರಾತ್ರಿಯಲ್ಲಿ ವಿಮಾನ ಇಳಿಸಿ 121 ಜನರ ರಕ್ಷಣೆ**

ನವದೆಹಲಿ, ಏ. 28 – ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ 121 ಭಾರತೀಯರನ್ನು ರಕ್ಷಿಸಲು ವಾಯುಪಡೆಯು ದಿಟ್ಟ ಕಾರ್ಯಾಚರಣೆ ನಡೆಸಿ ಯಶಸ್ಸು ಕಂಡಿದೆ.

ಸುಡಾನ್‌ನ ವಾಡಿ ಸೆಯಿಡ್ನಾ ವಿಮಾನ ನಿಲ್ದಾಣದ ಸಣ್ಣ ಏರ್‌ಸ್ಟ್ರಿಪ್‌ನಲ್ಲಿ ಸಂಪೂರ್ಣ ಕತ್ತಲಲ್ಲಿ ವಿಮಾನ ಇಳಿಸುವ ಮೂಲಕ ಜನರನ್ನು ರಕ್ಷಿಸಲಾಗಿದೆ.

ಗರ್ಭಿಣಿ ಮಹಿಳೆ ಹಾಗೂ ವೈದ್ಯಕೀಯ ನೆರವಿನ ಅಗತ್ಯವಾಗಿದ್ದ ಹಲವರನ್ನು ರಕ್ಷಿಸಲಾಗಿದೆ. ಇವರಿಗೆ ಪೋರ್ಟ್ ಸುಡಾನ್‌ಗೆ ಬರಲು ಯಾವುದೇ ದಾರಿ ಇರಲಿಲ್ಲ. ಹೀಗಾಗಿ ಕಾರ್ಯಾಚರಣೆ ನಡೆಸಲಾಯಿತು ಎಂದು ವಾಯುಪಡೆಯ ವಕ್ತಾರ ವಿಂಗ್ ಕಮಾಂಡರ್ ಆಶಿಶ್ ಮೊಘೆ ತಿಳಿಸಿದ್ದಾರೆ. ಇದೇ ಏರ್‌ಸ್ಟ್ರಿಪ್‌ನಲ್ಲಿ ಟರ್ಕಿ ದೇಶದ ವಿಮಾನ ರಕ್ಷಣಾ ಕಾರ್ಯಾಚರಣೆ ನಡೆಸುವಾಗ ಗುಂಡಿನ ದಾಳಿ ಎದುರಿಸಿತ್ತು.

ಸುಡಾನ್‌ನಲ್ಲಿರುವ ಭಾರತೀಯರನ್ನು ರಕ್ಷಿಸಲು ಆಪರೇಷನ್ ಕಾವೇರಿ ಎಂಬ ಹೆಸರಿನ ಕಾರ್ಯಾಚರಣೆ ನಡೆಸಲಾಗುತ್ತಿದೆ. ಅದರ ಅಂಗವಾಗಿ ಹಾಳಾದ ಸ್ಥಿತಿಯಲ್ಲಿದ್ದ ಏರ್‌ಸ್ಟ್ರಿಪ್ ಅನ್ನೇ ಬಳಸಿ ವಿಮಾನ ಇಳಿಸಲಾಗಿತ್ತು. ಇಲ್ಲಿ ವಿಮಾನಯಾನಕ್ಕೆ ಅಗತ್ಯವಾದ ಸೂಚನಾ ವ್ಯವಸ್ಥೆಯಾಗಲೀ, ಇಂಧನವಾಗಲೀ ಇರಲಿಲ್ಲ. ವಿಮಾನ ಇಳಿಯಲು ಅಗತ್ಯ ಬೆಳಕೂ ಇರಲಿಲ್ಲ ಎಂದು ವಿಂಗ್ ಕಮಾಂಡರ್ ಮೊಘೆ ತಿಳಿಸಿದ್ದಾರೆ.

ಹೀಗಾಗಿ ವಾಯುಪಡೆಯ ಸಿ-130ಜೆ ಸೂಪರ್ ಹರ್ಕ್ಯುಲಸ್ ವಿಮಾನವು ಎಲೆಕ್ಟ್ರೋ ಆಪ್ಟಿಕಲ್ ಹಾಗೂ ಇನ್‌ಫ್ರಾರೆಡ್ ಸೆನ್ಸಾರ್ ಬಳಸಿ ನಿಲ್ದಾಣದಲ್ಲಿ ಇಳಿಯಿತು. ರಾತ್ರಿ ಕನ್ನಡಕಗಳ ಮೂಲಕವೇ ವಿಮಾನದ ಸಿಬ್ಬಂದಿ ಕಾರ್ಯನಿರ್ವಹಿಸಬೇಕಾಯಿತು.

ವಾಯುಪಡೆಯ ಗರುಡ ದಳದ ಎಂಟು ಕಮಾಂಡೋಗಳು ಪ್ರಯಾಣಿಕರನ್ನು ವಿಮಾನಕ್ಕೆ ಕರೆ ತಂದರು. ನಂತರ ರಾತ್ರಿ ಕನ್ನಡಕಗಳನ್ನು ಬಳಸಿಯೇ ವಿಮಾನವನ್ನು ಟೇಕಾಫ್ ಮಾಡಲಾಯಿತು. ಇಡೀ ಕಾರ್ಯಾಚರಣೆ ವೇಳೆ ವಿಮಾನದ ಇಂಜಿನ್ ಅನ್ನು ಆನ್ ಸ್ಥಿತಿಯಲ್ಲೇ ಇರಿಸಲಾಗಿತ್ತು.

ಎರಡೂವರೆ ಗಂಟೆಗಳ ಕಾಲ ನಡೆದ ಈ ಕಾರ್ಯಾಚರಣೆ ಸಂಪೂರ್ಣ ಸುಸೂತ್ರವಾಗಿ ನಡೆದಿದೆ. ಇದು ವಾಯುಪಡೆಯ ಇತಿಹಾಸದಲ್ಲಿ ದಿಟ್ಟ ಕಾರ್ಯಾಚರಣೆಗಳ ಸಾಲಿಗೆ ಸೇರಲಿದೆ ಎಂದು ವಾಯುಪಡೆ ವಕ್ತಾರರು ಹೇಳಿದ್ದಾರೆ.

# ಶ್ರೀ ಕಾಳಿಕಾದೇವಿ ಪುನರ್ ಪ್ರತಿಷ್ಠಾಪನೆಯ ವಾರ್ಷಿಕೋತ್ಸವ



ದಾವಣಗೆರೆ, ಏ28- ನಗರದ ಶ್ರೀ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಶ್ರೀ ಕಾಳಿಕಾದೇವಿ ಮೂರ್ತಿಯ ಪುನರ್-ಪ್ರತಿಸ್ಥಾಪನೆಯ ವಾರ್ಷಿಕೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 30ರ ಭಾನುವಾರ ದೇವಸ್ಥಾನದಲ್ಲಿ ಪ್ರಾತಃಕಾಲ ಬೆಳಿಗ್ಗೆ 5-30 ಗಂಟೆಯಿಂದ ಹೋಮ, ಕುಂಭಾಭಿಷೇಕ, ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ.

# ಪಂಜಾಬ್ : ಬೆಳೆ ನಾಶವಾದರೆ ಕೃಷಿ ಕಾರ್ಮಿಕರಿಗೂ ಪರಿಹಾರ

ಲುಧಿಯಾನ, ಏ. 28 – ಪಂಜಾಬ್‌ನಲ್ಲಿ ಬೆಳೆ ನಾಶಕ್ಕೆ ನೀಡುವ ಪರಿಹಾರದ ಶೇ.10ರಷ್ಟನ್ನು ಕೃಷಿ ಕಾರ್ಮಿಕರಿಗೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಭಗವಂತ್ ಮಾನ್ ತಿಳಿಸಿದ್ದಾರೆ. ಸಂಪುಟ ಸಭೆಯ ನಂತರ ಮಾತನಾಡಿರುವ ಅವರು, ಕೃಷಿ ಕಾರ್ಮಿಕರು ಎದುರಿಸುವ ಸಮಸ್ಯೆಗಳು, ಕೆಲಸ ಕಳೆದುಕೊಳ್ಳುವುದು ಹಾಗೂ ಆದಾಯ ನಷ್ಟವಾಗುವುದನ್ನು ಪರಿಗಣಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದರು.


# ಆರ್. ಗಣೇಶ್‌ರಾವ್ ನಿಧನ



ದಾವಣಗೆರೆ, ಹೊಂಡದ ಸರ್ಕಲ್, ಜಾಲಿನಗರದ ವಾಸಿ ಶ್ರೀ ರೇಣುಕಾ ಎಲ್ಲಮ್ಮ ದೇವಿ ದೇವಸ್ಥಾನದ ಗೌರವಾಧ್ಯಕ್ಷರು, ಬಿಜೆಪಿ ಹಿರಿಯ ಮುಖಂಡರು, ಮಾಜಿ ಮಹಾಪೌರರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್‌ರಾವ್ ಜಾಧವ್ ಇವರ ತಂದೆ ಹೊಂಡದ ಸರ್ಕಲ್ ಕಟ್ಟಿಗೆ ಡಿಪೋ ಮಾಲೀಕರಾದ

**ಶ್ರೀ ಆರ್. ಗಣೇಶ್‌ರಾವ್**

ಇವರು, ದಿನಾಂಕ 28.04.2023ರ ರಾತ್ರಿ 8 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು.

ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.04.2023ರ ಮಧ್ಯಾಹ್ನ 2 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**


# ವಿಕಲಚೇತನರು, ಕೋವಿಡ್ ಬಾಧಿತರಿಗೆ ಮನೆ ಬಾಗಿಲಿಗೆ ಅಂಚೆ ಮತ ಪತ್ರಗಳು


ದಾವಣಗೆರೆ, ಏ.28- ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ದಾವಣಗೆರೆ ಉತ್ತರ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಸಂಬಂಧಿಸಿದ ವ್ಯಾಪ್ತಿಯಲ್ಲಿ 80+ ವಿಶೇಷ ವಿಕಲಚೇತನರು ಹಾಗೂ ಕೋವಿಡ್-19ರ ಬಾಧಿತ ಸೋಂಕಿತರಿಗೆ ಮನೆ ಬಾಗಿಲಿಗೆ ತೆರಳಿ ಅಂಚೆ ಮತಪತ್ರಗಳ ಮೂಲಕ ಮತದಾನ ಮಾಡುವ ಪ್ರಕ್ರಿಯೆ ನಾಳೆ ದಿನಾಂಕ 29ರ ಶನಿವಾರ ಬೆಳಿಗ್ಗೆ 7 ರಿಂದ ಸಂಜೆ 6 ರವರೆಗೆ ಪ್ರಾರಂಭವಾಗಲಿದೆ.

ಈಗಾಗಲೇ ಅಂಚೆ ಮತದಾನ ಮಾಡಲು ಅರ್ಜಿ ಸಲ್ಲಿಸಿರುವ ಎಲ್ಲಾ ಮತದಾರರು ತಮ್ಮ ಮತಕ್ಷೇತ್ರದಲ್ಲಿ ಇದ್ದು ಈ ಕಾರ್ಯಾಲಯದಿಂದ ನಿಯೋಜನೆಗೊಂಡಿರುವ ಅಧಿಕಾರಿಗಳಿಗೆ ಸಹಕಾರ ನೀಡಿ ಮತದಾನ ಮಾಡಲು ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

# ನಗರದಲ್ಲಿ ಇಂದು ತತ್ವ ಶುದ್ಧಿ ಧ್ಯಾನ ಶಿಬಿರ

ಇಂದಿನಿಂದ ಮೇ 1 ರ ವರೆಗೆ ಆಚಾರ್ಯ ಚೇತನ್ ಅವರಿಂದ ತತ್ವ ಶುದ್ಧಿ ಧ್ಯಾನ ಶಿಬಿರ ನಡೆಯಲಿದೆ. ಮಾಹಿತಿ ಹಾಗೂ ನೋಂದಣಿಗಾಗಿ ಸಂಪರ್ಕಿಸಿ : www.dhyanayoga.org ಅಥವಾ 9535656163.


# ವಿದೇಶ ಪ್ರವಾಸ - ಶುಭಾಶಯಗಳು



ಮಗಳು - ಅಳಿಯ ಮತ್ತು ಮೊಮ್ಮಗನನ್ನು ಭೇಟಿ ಮಾಡಲು ದಿನಾಂಕ 30.04.2023ರ ಭಾನುವಾರದಿಂದ ಲಂಡನ್ ಪ್ರವಾಸ ಕೈಗೊಂಡಿರುವ ಶ್ರೀ ಮುರುಘರಾಜೇಂದ್ರ ಕೋ - ಆಪರೇಟಿವ್ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕರಾದ

**ಶ್ರೀ ಎಸ್.ಪಿ. ವೀರಭದ್ರಪ್ಪ ಮತ್ತು ಶ್ರೀಮತಿ ಎಸ್.ಸಿ. ವಿಜಯ**

ದಂಪತಿಗೆ ಹಾರ್ದಿಕ ಶುಭಾಶಯಗಳು.

ಶ್ರೀ ವೀರಭದ್ರಪ್ಪ ಹಾಗೂ ಶ್ರೀಮತಿ ವಿಜಯ ದಂಪತಿಯ ವಿದೇಶ ಪ್ರವಾಸವು ಸುಖಕರವಾಗಿರಲೆಂದು ಶುಭ ಹಾರೈಸುತ್ತೇವೆ.

**ಹಿತೈಷಿಗಳು - ಬಂಧುಗಳು - ಸ್ನೇಹಿತರು**



# ಕೈಲಾಸ ಶಿವಗಣಾರಾಧನೆ



ಜನನ 27-07-1965

ಮರಣ 20-04-2023

**ದಿ|| ಶ್ರೀಮತಿ ವಿನೋದ ಶಿವಕುಮಾರ್**

ಚಿತ್ರದುರ್ಗ ಜಿಲ್ಲೆ ಭೀಮಸಮುದ್ರ ಗ್ರಾಮದ ವಾಸಿ

**ಶ್ರೀಮತಿ ಗಾಯತ್ರಿ, ಶ್ರೀ ಜಿ.ಎಂ. ಸಿದ್ದೇಶ್ವರ ಮತ್ತು ಸಹೋದರರು**

ಸಂಸದರು ಹಾಗೂ ಮಾಜಿ ಕೇಂದ್ರ ಸಚಿವರು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ: 20–04–2023ರ ಗುರುವಾರ ಸಂಜೆ 6.50ಕ್ಕೆ

**ದಿ|| ಶ್ರೀಮತಿ ನಾಗರತ್ನಮ್ಮ ಮತ್ತು ದಿ|| ಶ್ರೀ ಜಿ.ಜಯದೇವಪ್ಪ** ಇವರ ಪುತ್ರ

ಶ್ರೀ ಜಿ.ಜೆ.ಶಿವಕುಮಾರ ಇವರ ಧರ್ಮಪತ್ನಿ

**ಶ್ರೀಮತಿ ವಿನೋದ ಶಿವಕುಮಾರ್** ಇವರು

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ: 30–04–2023ನೇ ಭಾನುವಾರ ಬೆಳಿಗ್ಗೆ 10.00 ಗಂಟೆಗೆ

ಭೀಮಸಮುದ್ರದಲ್ಲಿರುವ ಲಿಂ. ಜಿ.ಜಯಪ್ರಕಾಶ್ ಇವರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತ ಕುಟುಂಬ ವರ್ಗದವರು**

* ಶ್ರೀಮತಿ ಸುನಂದ ಜಯಪ್ರಕಾಶ್ ಮತ್ತು ಮಕ್ಕಳು, ಭೀಮಸಮುದ್ರ. * ಶ್ರೀಮತಿ ಶಶಿಕಲಾ ಈಶ್ವರಪ್ಪ ಮತ್ತು ಮಕ್ಕಳು, ದಾವಣಗೆರೆ. * ಶ್ರೀಮತಿ ಟಿ.ಜಿ.ಗೀತಮ್ಮ ಈಶ್ವರಪ್ಪ ಮತ್ತು ಮಕ್ಕಳು ತುರೆಬೈಲು. * ಶ್ರೀಮತಿ ಜಿ.ಎಸ್.ಸೌಮ್ಯ ಶ್ರೀ ಕಿರಣ್ ಮತ್ತು ಅಥರ್ವ(USA). * ಶ್ರೀ ಟಿ.ಜಿ.ಸಿ.ಸುರೇಂದ್ರನಾಥ್, ಸಹೋದರರು ಮತ್ತು ಮಕ್ಕಳು ಹಿರೇತೊಗಲೇರಿ. * ಶ್ರೀ ಜಿ.ಎಸ್ ಮಲ್ಲಿಕಾರ್ಜನ.

ಭೀಮಸಮುದ್ರ ಗೌಡ್ರು ವಂಶಸ್ಥರು, ಪಟೇಲ ವಂಶಸ್ಥರು ಹಾಗೂ ತೊಗಲೇರಿ ಗೌಡ್ರು ವಂಶಸ್ಥರು



# ಶ್ರೀಮತಿ ವಿಮಲಮ್ಮ ನಿಧನ



ದಾವಣಗೆರೆ ತರಳಬಾಳು ಬಡಾವಣೆ (ವಿದ್ಯಾನಗರ) 2ನೇ ಮೇನ್, 9ನೇ ಕ್ರಾಸ್ ವಾಸಿ ಶ್ರೀ ಓದೇಗೌಡ್ರು ರಾಮಚಂದ್ರಪ್ಪ ಇವರ ಧರ್ಮಪತ್ನಿ

**ಶ್ರೀಮತಿ ವಿಮಲಮ್ಮ**

ಇವರು, ದಿನಾಂಕ 28-4-2023ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 29.4.2023ರ ಶನಿವಾರ ಬೆಳಿಗ್ಗೆ 10.30ರವರೆಗೆ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಮಧ್ಯಾಹ್ನ 12.30ಕ್ಕೆ ಹರಿಹರ ತಾಲ್ಲೂಕು ಎರೇಬೂದಿಹಾಳ್ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದು:ಖತಪ್ತ ಕುಟುಂಬ ವರ್ಗ**

ಮೊ : 98869 38281, 98807 93331


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte